ಸಡಾಕೊ ಮತ್ತು
ಸಾವಿರ ಪೇಪರ್ ಕ್ರೇನ್‌ಗಳು

ಎಲೀನರ್ ಕೋರ್

ವಿವರಣೆ : ರೊನಾಲ್ಡ್ ಹಿಮ್ಲರ್

ಕನ್ನಡಕ್ಕೆ: ಪ್ರವೀಣ್ ಎಸ್, ಕೋಲಾರ

ಚಿಜುಕೊಳ ಉಡುಗೊರೆ

ಆ ಮಧ್ಯಾಹ್ನ ಚಿಜುಕೊ ಸಡಾಕೊಳನ್ನು ಭೇಟಿ ಮಾಡಲು ಬಂದ ಮೊದಲಿಗಳು. ತನ್ನ ಬೆನ್ನ ಹಿಂದೆ ಏನೋ ಹಿಡಿದುಕೊಂಡು, ಅವಳು ನಿಗೂಢವಾಗಿ ನಗುತ್ತಾ "ನಿನ್ನ ಕಣ್ಣುಗಳನ್ನು ಮುಚ್ಚು" ಎಂದಳು. ಸಡಾಕೊ ತನ್ನ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿಕೊಂಡಾಗ, ಚಿಜುಕೊ ಹಾಸಿಗೆಯ ಮೇಲೆ ಕೆಲವು ಕಾಗದ ಮತ್ತು ಕತ್ತರಿಗಳನ್ನು ಹಾಕಿದಳು. "ಈಗ ನೀನು ಕಣ್ಣು ಬಿಡಬಹುದು" ಎಂದು ಅವಳು ಹೇಳಿದಳು.

"ಏನದು?" ಸಡಾಕೊ ಕಾಗದವನ್ನು ದಿಟ್ಟಿಸುತ್ತಾ ಕೇಳಿದಳು.

"ನೀನು ಗುಣಮುಖಳಾಗಲು ನಾನು ಒಂದು ದಾರಿ ಹುಡುಕಿದ್ದೇನೆ ಎಂದು ಚಿಜುಕೊ ತನ್ನ ಬಗ್ಗೆ ಸಂತೋಷಪಟ್ಟಳು," ಅವಳು ಹೆಮ್ಮೆಯಿಂದ ಹೇಳಿದಳು. "ನೋಡ್ತಾ ಇರು!" ಅವಳು ಚಿನ್ನದ ಕಾಗದದ ತುಂಡನ್ನು ದೊಡ್ಡ ಚೌಕಕ್ಕೆ ಕತ್ತರಿಸಿದಳು. ಸ್ವಲ್ಪ ಸಮಯದಲ್ಲೇ ಅವಳು ಅದನ್ನು ಸುಂದರವಾದ ಕ್ರೇನ್‌ಗೆ ಮತ್ತೆ ಮತ್ತೆ ಮಡಿಚಿದಳು!

ಸಡಾಕೊ ಆಶ್ಚರ್ಯಚಕಿತಳಾಗಿ ಕೇಳಿದಳು"ಆದರೆ ಈ ಕಾಗದದ ಹಕ್ಕಿ ನನ್ನನ್ನು ಹೇಗೆ ಗುಣಪಡಿಸುತ್ತದೆ?"

"ಕ್ರೇನ್ ಬಗ್ಗೆ ಹಳೆಯ ಕಥೆ ನಿನಗೆ ನೆನಪಿಲ್ಲವೇ?" ಚಿಜುಕೊ ಕೇಳಿದಳು. "ಒಂದು ಸಾವಿರ ವರ್ಷ ಬದುಕಬೇಕು ಅಂತ ಅಂದುಕೊಂಡ ಒಬ್ಬ ಅಸ್ವಸ್ಥ ವ್ಯಕ್ತಿ ಸಾವಿರ ಪೇಪರ್ ಕ್ರೇನ್‌ಗಳನ್ನು ಮಡಿಚಿದರೆ, ದೇವರು ಅವರ ಆಸೆಯನ್ನು ಈಡೇರಿಸಿ ಅವರನ್ನು ಮತ್ತೆ ಆರೋಗ್ಯವಂತನನ್ನಾಗಿ ಮಾಡುತ್ತಾನೆ. ಅವಳು ಕ್ರೇನ್ ಅನ್ನು ಸಡಾಕೊಗೆ ಕೊಟ್ಟು,"ಇಗೋ ನಿನ್ನ ಮೊದಲನೆಯದು" ಎಂದಳು.

ಪರಿವಿಡಿ

ಮುನ್ನುಡಿ	7
1 ಶುಭ ಚಿಹ್ನೆಗಳು	9
2 ಶಾಂತಿ ದಿನ	15
3 ಸಡಕೋನ ರಹಸ್ಯ	21
4 ಇನ್ನು ಮುಂದೆ ಒಂದು ರಹಸ್ಯವಿಲ್ಲ	28
5 ಗೋಲ್ಡನ್ ಕ್ರೇನ್	33
6 ಕೆಂಜಿ	40
7 ನೂರಾರು ಆಸೆಗಳು	48
8 ಕೊನೆಯ ದಿನಗಳು	52
9 ಗಾಳಿಯೊಂದಿಗೆ ರೇಸಿಂಗ್	60
10. ಉಪಸಂಹಾರ	65

ಮೊದಲ ಮಾತು

'ಸಡಾಕೊ ಅಂಡ್ ದಿ ಥೌಸಂಡ್ ಪೇಪರ್ ಕ್ರೇನ್ಸ್' 1943 ರಿಂದ 1955 ರವರೆಗೆ ಜಪಾನ್‌ನಲ್ಲಿ ವಾಸಿಸುತ್ತಿದ್ದ ಪುಟ್ಟ ಹುಡುಗಿಯ ನಿಜ ಜೀವನವನ್ನು ಆಧರಿಸಿದ ಕೃತಿಯಾಗಿದೆ.

ಎರಡನೇ ಮಹಾಯುದ್ಧವನ್ನು ಕೊನೆಗೊಳಿಸುವ ಪ್ರಯತ್ನದಲ್ಲಿ ಯುನೈಟೆಡ್ ಸ್ಟೇಟ್ಸ್ ವಾಯುಪಡೆಯು ಹಿರೋಷಿಮಾ ನಗರದ ಮೇಲೆ ಪರಮಾಣು ಬಾಂಬ್ ಹಾಕಿದಾಗ ಅವಳು ಅಲ್ಲಿದ್ದಳು. ಹತ್ತು ವರ್ಷಗಳ ನಂತರ ಬಾಂಬ್‌ನಿಂದ ಬಂದ ವಿಕಿರಣದ ಪರಿಣಾಮವಾಗಿ ಅವಳು ಸಾವನ್ನಪ್ಪಿದಳು.

ಆಕೆಯ ಧೈರ್ಯವೇ ಸಡಾಕೊಳನ್ನು ಜಪಾನ್‌ನಲ್ಲಿ ಮಕ್ಕಳ ನಾಯಕಿಯನ್ನಾಗಿ ಮಾಡಿತು. ಇದು ಸಡಾಕೊಳ ಕಥೆ.

1.

ಶುಭ ಚಿಹ್ನೆಗಳು

ಸಡಾಕೊ ಹುಟ್ಟಿದ್ದೇ ಓಟಗಾರ್ತಿಯಾಗಲು. ಸಡಾಕೊ ನಡೆಯಲು ಕಲಿಯುವ ಮೊದಲೇ ಓಡಲು ಕಲಿತಿದ್ದಳು ಎಂದು ಅವಳ ತಾಯಿ ಯಾವಾಗಲೂ ಹೇಳುತ್ತಿದ್ದರು.

ಆಗಸ್ಟ್ 1954ರ ಒಂದು ಬೆಳಿಗ್ಗೆ ಸಡಾಕೊ ಬಟ್ಟೆ ಧರಿಸಿದ ತಕ್ಷಣ ಬೀದಿಗೆ ಓಡಿದಳು. ಜಪಾನ್‌ನ ಬೆಳಗಿನ ಸೂರ್ಯ ಅವಳ ಕಪ್ಪು ಕೂದಲಿನಲ್ಲಿ ಕಂದು ಬಣ್ಣ ಬೆಳಕು ಮೂಡಿಸಿದ. ನೀಲಿ ಆಕಾಶದಲ್ಲಿ ಮೋಡದ ಚುಕ್ಕೆ ಕೂಡ ಇರಲಿಲ್ಲ. ಅದು ಒಳ್ಳೆಯ ಸೂಚನೆಯಾಗಿತ್ತು, ಸಡಾಕೊ ಯಾವಾಗಲೂ ಅದೃಷ್ಟದ ಚಿಹ್ನೆಗಳಿಗಾಗಿ ಹುಡುಕುತ್ತಿದ್ದಳು.

ಮನೆಯಲ್ಲಿ ಅವಳ ಸಹೋದರಿ ಮತ್ತು ಇಬ್ಬರು ಸಹೋದರರು ಇನ್ನೂ ತಮ್ಮ ಹಾಸಿಗೆಯ ಮೇಲೆ ಮಲಗಿದ್ದರು. ಅವಳು ತನ್ನ ದೊಡ್ಡಣ್ಣ ಮಸಾಹಿರೊ ನನ್ನು ಬೆರಳಿನಿಂದ ತಿವಿದು, ಸೋಮಾರಿಗಳೇ ಎದ್ದೇಳಿ!“ ಇಂದು ಶಾಂತಿಯ ದಿನ!“ ಎಂದಳು.

ಮಸಾಹಿರೋ ನರಳುತ್ತಾ ಆಕಳಿಸಿದ. ಅವನು ಸಾಧ್ಯವಾದಷ್ಟು ಕಾಲ ಮಲಗಲು ಬಯಸುವವನು, ಆದರೆ ಹೆಚ್ಚಿನ ಹದಿನಾಲ್ಕು ವರ್ಷದ ಹುಡುಗರಂತೆ, ಅವನಿಗೂ ಸಹ ತಿನ್ನುವುದೆಂದರೆ ತುಂಬಾ ಇಷ್ಟ ಬೀನ್ ಸೂಪ್‌ನ ರುಚಿಕರ ಪರಿಮಳವನ್ನು ಆಘ್ರಾಣಿಸಿ, ಮಸಾಹಿರೋ ಎದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಮಿತ್ಸು ಮತ್ತು ಈಜಿ ಕೂಡ ಎಚ್ಚರಗೊಂಡರು.

ಸಡಾಕೊ ಈಜಿಗೆ ಬಟ್ಟೆ ಧರಿಸಲು ಸಹಾಯ ಮಾಡಿದಳು. ಅವನಿಗೀಗ ಆರು ವರ್ಷ, ಆದರೆ ಕೆಲವೊಮ್ಮೆ ಅವನು ಸಾಕ್ಸ್ ಅಥವಾ ಶರ್ಟ್‌ಗಳನ್ನು ಎಲ್ಲೋ ಇಟ್ಟು ಮತ್ತೆಲ್ಲೋ ಹುಡುಕುತ್ತಿದ್ದನು!. ನಂತರ, ಸಡಾಕೊ ಹಾಸಿಗೆ, ಹೊದಿಕೆಗಳನ್ನು ಮಡಡಚಿ ಒಂಬತ್ತು ವರ್ಷದ ಅವಳ ಸಹೋದರಿ ಮಿಟ್ಸು ಸಹಾಯದಿಂದ ಅವುಗಳನ್ನು ಕ್ಲೋಸೆಟ್‌ನಲ್ಲಿ ಇಟ್ಟಳು.

ಅಡುಗೆಮನೆಯೊಳಗೆ ಸುಂಟರಗಾಳಿಯಂತೆ ನುಗ್ಗುತ್ತಾ, ಸಡಾಕೊ "ಓಹ್, ತಾಯಿ! ಕಾರ್ನೀವಲ್‌ಗೆ ಹೋಗಲು ನನಗೆ ತುಂಬಾ ಕಾತರವಿದೆ. ದಯವಿಟ್ಟು ಬ್ರೇಕ್‌ಫಾಸ್ಟನೊಂದಿಗೆ ಬೇಗನೆ ಹೋಗಬಹುದೇ?" ಎಂದು ಅಳುತ್ತಾಳೆ.

ಅವಳ ತಾಯಿ ಉಪ್ಪಿನಕಾಯಿ, ಕತ್ತರಿಸಿದ ಮೂಲಂಗಿಯನ್ನು,ಅನ್ನ ಮತ್ತು ಸೂಪ್ ಗಳನ್ನು ಬಡಿಸುತ್ತಿದ್ದಳು. "ನಿನಗೆ ಹನ್ನೊಂದು ವರ್ಷ ಮತ್ತು ಚೆನ್ನಾಗಿ ತಿಳಿದಿರಬೇಕು," ಅವಳು ಗದರಿಸಿದಳು, "ನೀನು ಇದನ್ನು ಕಾರ್ನೀವಲ್ ಎಂದು ಕರೆಯಬಾರದು. ಪ್ರತಿ ವರ್ಷ ಆಗಸ್ಟ್ ಆರನೇ ತಾರೀಖು, ನಮ್ಮ ನಗರದ ಮೇಲೆ ಪರಮಾಣು ಬಾಂಬ್ ಬೀಳಿಸಿದಾಗ ಮಡಿದವರನ್ನು ನಾವು ಸ್ಮರಿಸುತ್ತೇವೆ. ಹಾಗಾಗಿಅದು ಸ್ಮಾರಕ ದಿನ"

ಶ್ರೀ ಸಸಾಕಿ ಹಿಂದಿನ ವರಾಂಡಾದಿಂದ ಒಳಗೆ ಬಂದರು. "ಸರಿ" ಎಂದು ಹೇಳಿ. "ಸಡಕೋ ಚಾನ್, ನೀನು ಗೌರವ ತೋರಿಸಬೇಕು. ಆ ಭೀಕರ ದಿನ ನಿಮ್ಮ ಸ್ವಂತ ಅಜ್ಜಿಯನ್ನು ಕೊಲ್ಲಲಾಯಿತು"

ನಾನು ಒಬಾ ಚಾನ್ ಅವರನ್ನು ಗೌರವಿಸುತ್ತೇನೆ" ಎಂದ ಸಡಾಕೊ "ನಾನು ಪ್ರತಿದಿನ ಬೆಳಿಗ್ಗೆ ಅವಳ ಆತ್ಮಕ್ಕಾಗಿ ಪ್ರಾರ್ಥಿಸುತ್ತೇನೆ. ಇಂದು ನಾನು ತುಂಬಾ ಸಂತೋಷವಾಗಿದ್ದೇನೆ."

"ವಾಸ್ತವವಾಗಿ, ಈಗ ನಮ್ಮ ಪ್ರಾರ್ಥನೆಯ ಸಮಯ," ಅವಳ ತಂದೆ ಹೇಳಿದರು.

ಸಸಾಕಿ ಕುಟುಂಬವು ಒಂದು ಸಣ್ಣ ಬಲಿಪೀಠದ ಶೆಲ್ಫ್ ಸುತ್ತಲೂ ಒಟ್ಟುಗೂಡಿತು, ಅಲ್ಲಿ ಚಿನ್ನದ ಚೌಕಟ್ಟಿನಲ್ಲಿ ಓಬಾ ಚಾನ್ ಅವರ ಚಿತ್ರವಿತ್ತು. ಸಡಾಕೊ ಭಾವಣೆಯನ್ನು ನೋಡುತ್ತಾ ತನ್ನ ಅಜ್ಜಿಯ ಆತ್ಮವು ಬಲಿಪೀಠದ ಮೇಲೆ ಎಲ್ಲೋ ತೇಲುತ್ತಿರಬಹುದೆ? ಎಂದು ಆಶ್ಚರ್ಯಪಟ್ಟಳು.

"ಸಡಕೋ ಚಾನ್" ಶ್ರೀ ಸಾಸಕಿ ಗದರಿಸಿದರು.

ಸಡಾಕೊ ತಟ್ಟನೆ ತಲೆ ಬಾಗಿಸಿದಳು. ಶ್ರೀ ಸಸಾಕಿ ಮಾತನಾಡುವಾಗ ಅವಳು ಚಡಪಡಿಸುತ್ತಾ ತನ್ನ ಬರಿ ಕಾಲ್ಬೆರಳುಗಳನ್ನು ತಿರುಗಿಸಿದಳು. ಅವರ ಪೂರ್ವಜರ ಆತ್ಮಗಳು ಸಂತೋಷ ಮತ್ತು ಶಾಂತಿಯುತವಾಗಿರಲಿ ಎಂದು ಅವರು ಪ್ರಾರ್ಥಿಸಿದರು. ಅವರು ತಮ್ಮ ಕ್ಷೌರಿಕ(ಹೇರ್ ಕಟ್) ನ ಅಂಗಡಿಗೆ ಧನ್ಯವಾದಗಳನ್ನು ಅರ್ಪಿಸಿದರು. ಅವರು ತಮ್ಮ ಸುಂದರ ಮಕ್ಕಳಿಗಾಗಿ ಧನ್ಯವಾದಗಳನ್ನು ಅರ್ಪಿಸಿದರು ಮತ್ತು ಅವರ ಕುಟುಂಬವು ಲ್ಯುಕೇಮಿಯಾ ಎಂಬ ಪರಮಾಣು ಬಾಂಬ್ ಕಾಯಿಲೆಯಿಂದ ರಕ್ಷಿಸಲ್ಪಡಲಿ ಎಂದು ಅವರು ಪ್ರಾರ್ಥಿಸಿದರು.

ಒಂಬತ್ತು ವರ್ಷಗಳ ಹಿಂದೆ ಹಿರೋಷಿಮಾದ ಮೇಲೆ ಪರಮಾಣು ಬಾಂಬ್ ಹಾಕಲಾಗಿದ್ದರೂ ಸಹ, ಅನೇಕರು ಈಗಲೂ ಈ ಕಾಯಿಲೆಯಿಂದ ಸಾವಿಗೀಡಾಗುತ್ತಿದ್ದರು. ಅದು ಈಗಲೂ ಗಾಳಿಯಲ್ಲಿ ವಿಕಿರಣ(ಒಂದು ರೀತಿಯ ವಿಷ) ವನ್ನು ತುಂಬಿತ್ತು ಅದು ಜನರೊಳಗೆ ದೀರ್ಘಕಾಲ ಉಳಿದುಬಿಟ್ಟಿತು.

ಉಪಾಹಾರದ ಸಮಯದಲ್ಲಿ ಸಡಕೋ ತನ್ನ ಸೂಪ್ ಮತ್ತು ಅನ್ನವನ್ನು ಸದ್ದುಮಾಡುತ್ತಾ ಸೇವಿಸಿದಳು. ಹಸಿದ ಡ್ರ್ಯಾಗನ್‌ಗಳಂತೆ ತಿನ್ನುವ ಹುಡುಗಿಯರ ಬಗ್ಗೆ ಮಸಾಹಿರೋ ಮಾತನಾಡಲು ಪ್ರಾರಂಭಿಸಿದ. ಆದರೆ ಸಡಕೋ ಅವನ ಕೀಟಲೆಯ ಮಾತಿಗೆ ಕಿವಿಗೊಡಲಿಲ್ಲ. ಕಳೆದ ವರ್ಷದ ಶಾಂತಿ ದಿನದಂದಆಚರಣೆಗಳನ್ನು ಮೆಲುಕುಹಾಕಿದಳು- ಅವಳ ಆಲೋಚನೆಗಳು ಜನಸಂದಣಿ, ಸಂಗೀತ ಮತ್ತು ಪಟಾಕಿಗಳು, ಸಡಕೋ ಇನ್ನೂ ಹತ್ತಿ ಕ್ಯಾಂಡಿಯನ್ನು ಸವಿಯಬಲ್ಲಳು!

ಅವಳು ಇತರರಿಗಿಂತ ಮೊದಲು ಉಪಾಹಾರ ಮುಗಿಸಿದಳು. ಅವಳು ಮೇಲಕ್ಕೆ ಏಳುವಾಗ ಅವಳ ಕಾಲು ಮೇಜಿಗೆ ತಗುಲಿ ಅಲುಗಾಡಿತು. ಅವಳು ತನ್ನ ವಯಸ್ಸಿನ ಇತರರಿಗಿಂತ ಎತ್ತರವಾಗಿದ್ದಳು ಮತ್ತು ಅವಳ ಉದ್ದವಾದ ಕಾಲುಗಳು ಯಾವಾಗಲೂ ಯಾವಾಗಲೂ ಹೀಗೆ ಅಡ್ಡಿಗೊಳಿಸುತ್ತಿದ್ದವು.

"ಬನ್ನಿ ಮಿತ್ಸು ಚಾನ್ ," ಅವಳು ಹೇಳಿದಳು. "ನಾವು ಬೇಗ ಹೋಗೋದಿದೆ, ಬೇಗ ಪಾತ್ರೆ ತೊಳೆಯೋಣ."

ಅಡುಗೆಮನೆ ಸ್ವಚ್ಛವಾಗಿ ಮತ್ತು ಅಚ್ಚುಕಟ್ಟಾದ ಸಂತರ, ಸಡಾಕೊ ತನ್ನ ಜಡೆಗಳಿಗೆ ಕೆಂಪು ರಿಬ್ಬನ್ ಕಟ್ಟಿಕೊಂಡು ಬಾಗಿಲಿನ ಬಳಿ ಅಸಹನೆಯಿಂದ ನಿಂತಳು.

"ಸಡಕೋ ಚಾನ್," ಅವಳ ತಾಯಿ ಮೆಲ್ಲನೆ ಹೇಳಿದಳು, "ನಾವು ಏಳೂವರೆ ಗಂಟೆಯವರೆಗೆ ಹೊರಡುವುದಿಲ್ಲ. ಹೊರಡುವ ಸಮಯ ಬರುವವರೆಗೆ ನೀನು ಶಾಂತವಾಗಿ ಕುಳಿತುಕೊ"

ಸಡಾಕೊ ಟಾಟಾಮಿ ಚಾಪೆಯ ಮೇಲೆ ಗುಡುಗುತ್ತಾ ಕೆಳಗೆ ಕುಳಿತಳು. ಅವಳ ಹೆತ್ತವರಿಗೆ ಯಾವುದೂ ಆತುರ ತರಲಿಲ್ಲ. ಅವಳು ಅಲ್ಲಿ ಕುಳಿತಿದ್ದಾಗ ಕೋಣೆಯಾದ್ಯಂತ ಒಂದು ಜೇಡವು ಓಡಾಡುತ್ತಿತ್ತು. ಜೇಡವು ಅದೃಷ್ಟದ ಸಂಕೇತವಾಗಿತ್ತು. ಈಗ ಸಡಾಕೊಗೆ ದಿನವು ಅದ್ಭುತವಾಗಿರುತ್ತದೆ ಎಂದು ಖಚಿತವಾಗಿತ್ತು. ಅವಳು ಕೀಟವನ್ನು ತನ್ನ ಕೈಯಲ್ಲಿ ಹಿಡಿದು ಎಚ್ಚರಿಕೆಯಿಂದ ಹೊರಗೆ ಬಿಟ್ಟಳು.

"ಅದು ಮೂರ್ಖತನ," ಮಸಾಹಿರೋ ಹೇಳಿದರು. "ಜೇಡಗಳು ನಿಜವಾಗಿಯೂ ಅದೃಷ್ಟವನ್ನು ತರುವುದಿಲ್ಲ."

"ಕಾದು ನೋಡು!" ಸಡಾಕೊ ಹರ್ಷಚಿತ್ತದಿಂದ ಹೇಳಿದಳು.

2.
ಶಾಂತಿ ದಿನ

ಕುಟುಂಬವು ಹೊರಗೆ ಹೊರಡಲು ಪ್ರಾರಂಭಿಸಿದಾಗ, ವಾತಾವರಣ ಬೆಚ್ಚಗಿತ್ತು ಮತ್ತು ಜನನಿಬಿಡ ಬೀದಿಗಳಲ್ಲಿ ಧೂಳು ಆವರಿಸಿತ್ತು. ಸಡಾಕೊ ತನ್ನ ಆತ್ಮೀಯ ಗೆಳತಿ ಚಿಜುಕೊನ ಮನೆಗೆ ಓಡಿದಳು. ಇಬ್ಬರೂ ಕಿಂಡರ್‌ಗಾರ್ಟನ್‌ನಿಂದಲೂ ಸ್ನೇಹಿತರಾಗಿದ್ದರು. ಒಂದೇ ರೆಂಬೆಯ ಮೇಲಿನ ಎರಡು ಪೈನ್ ಸೂಜಿಗಳಂತೆ ಅವರು ಯಾವಾಗಲೂ ಹತ್ತಿರ ಎಂದು ಸಡಾಕೊಗೆ ಖಚಿತವಾಗಿ ಗೊತ್ತಿತ್ತು.

ಚಿಜುಕೊ ಕೈ ಬೀಸಿ ಅವಳ ಕಡೆಗೆ ನಡೆದಳು. ಸಡಾಕೊ ನಿಟ್ಟುಸಿರು ಬಿಟ್ಟಳು. ಕೆಲವೊಮ್ಮೆ ತನ್ನ ಸ್ನೇಹಿತೆ ಸ್ವಲ್ಪ ವೇಗವಾಗಿ ಚಲಿಸಬೇಕೆಂದು ಅವಳು ಬಯಸುತ್ತಿದ್ದಳು. "ಅಂತಹ ನಿದಾನಗತಿಯ ಆಮೆಯಾಗಬೇಡ!" ಅವಳು ಕೂಗಿದಳು. "ನಾವು ಏನನ್ನೂ ಕಳೆದುಕೊಳ್ಳದಂತೆ ಬೇಗನೆ ಹೋಗೋಣ."

"ಸಡಕೋ ಚಾನ್, ತುಂಬಾ ಬಿಸಿಲಿದೆ, ನಿಧಾನವಾಗಿ ಹೋಗು" ಎಂದು ಅವಳ ತಾಯಿ ಅವಳನ್ನು ಕರೆದಳು. ಆದರೆ ಅದಾಗಲೇ ತುಂಬಾ ತಡವಾಗಿತ್ತು. ಹುಡುಗಿಯರು ಈಗಾಗಲೇ ಬೀದಿಯಲ್ಲಿ ಓಡುತ್ತಿದ್ದರು,

"ಶ್ರೀಮತಿ, ಸಸಾಕಿ ಬೇಸರದಿಂದ. "ಸಡಾಕೊ ಯಾವಾಗಲೂ ಮೊದಲಿಗಳಾಗುವ ಆತುರದಲ್ಲಿರುತ್ತಾಳೆ, ಅವಳು ಎಂದಿಗೂ ಕೇಳಲು ನಿಲ್ಲುವುದಿಲ್ಲ" ಎಂದುಕೊಂಡಳು.

ಶ್ರೀ ಸಸಾಕಿ ನಗುತ್ತಾ, "ಸರಿ, ಅವಳು ಓಡಲು, ಹಾರಲು ಅಥವಾ ನೆಗೆಯಲು ಸಾಧ್ಯವಾದಾಗ ಅವಳು ನಡೆಯುವುದನ್ನು ನೀನು ಎಂದಾದರೂ ನೋಡಿದ್ದೀರಯಾ?" ಸಡಾಕೊ ಅಷ್ಟು ವೇಗದ, ಬಲಿಷ್ಠ ಓಟಗಾರ್ತಿಯಾಗಿದ್ದರಿಂದ ಅವರ ಧ್ವನಿಯಲ್ಲಿ ಹೆಮ್ಮೆ ಇತ್ತು.

ಪೀಸ್ ಪಾರ್ಕ್ ಪ್ರವೇಶದ್ವಾರದಲ್ಲಿ ಜನರು ಸ್ಮಾರಕ ಕಟ್ಟಡದ ಮೂಲಕ ಮೌನವಾಗಿ ನಡೆದುಕೊಂಡು ಬಂದರು. ಪಾಳುಬಿದ್ದ ನಗರದಲ್ಲಿ ಸತ್ತವರು ಮತ್ತು ಸಾಯುತ್ತಿರುವವರ ಛಾಯಾಚಿತ್ರಗಳು ಗೋಡೆಗಳ ಮೇಲಿದ್ದವು. ಪರಮಾಣು ಬಾಂಬ್ - ಥಂಡರ್ಬೋಲ್ಟ್ - ಹಿರೋಷಿಮಾವನ್ನು ಮರುಭೂಮಿಯನ್ನಾಗಿ ಮಾಡಿತ್ತು.

ಸಡಾಕೊ ಆ ಭಯಾನಕ ಚಿತ್ರಗಳನ್ನು ನೋಡಲು ಇಷ್ಟಪಡಲಿಲ್ಲ. ಅವಳು ಚಿಜುಕೊಳ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು ಕಟ್ಟಡದ ಮೂಲಕ ವೇಗವಾಗಿ ನಡೆದಳು.

"ನನಗೆ ಥಂಡರ್‌ಬೋಲ್ಟ್ ನೆನಪಿದೆ," ಸಡಾಕೊ ತನ್ನ ಸ್ನೇಹಿತೆಗೆ ಪಿಸುಗುಟ್ಟಿದಳು, "ಒಂದು ಮಿಲಿಯನ್ ಸೂರ್ಯರ ಬೆಳಕು ಇತ್ತು. ನಂತರ ಶಾಖವು ನನ್ನ ಕಣ್ಣುಗಳನ್ನು ಸೂಜಿಗಳಂತೆ ಚುಚ್ಚಿತು."

"ನಿನಗೆ ಅವೆಲ್ಲಾ ನೆನಪಿರಲು ಹೇಗೆ ಸಾಧ್ಯ?" ಚಿಜುಕೊ ಉದ್ಗರಿಸಿದಳು. "ಆಗ ನೀನು ಇನ್ನೂ ಮಗುವಾಗಿದ್ದೆ!"

"ಹೌದು, ನನಗೆ ಗೊತ್ತು!" ಸಡಾಕೊ ಭಾವಾವೇಷದಿಂದ ಹೇಳಿದಳು.

ಬದ್ಧ ಪುರೋಹಿತರು ಮತ್ತು ಮೇಯರ್ ಅವರ ಭಾಷಣಗಳ ನಂತರ, ನೂರಾರು ಬಿಳಿ ಪಾರಿವಾಳಗಳನ್ನು ಅವುಗಳ ಪಂಜರಗಳಿಂದ ಮುಕ್ತಗೊಳಿಸಲಾಯಿತು. ಝರ್ಜರಿತವಾದ ಪರಮಾಣು ಗುಮ್ಮಟವನ್ನು ಸುತ್ತುವರೆದವು. ಸಡಾಕೊ ಪಾರಿವಾಳಗಳನ್ನು 'ಆಕಾಶದ ಸ್ವಾತಂತ್ರ್ಯಕ್ಕೆ ಹಾರುವ ಸತ್ತವರ ಆತ್ಮಗಳಂತೆ ಕಾಣುತ್ತವೆ' ಎಂದು ಭಾವಿಸಿದಳು.

ಸಮಾರಂಭಗಳು ಮುಗಿದ ನಂತರ, ಸಡಾಕೊ ತನ್ನವರನ್ನು ನೇರವಾಗಿ ಬೊಂಬಾಯಿ ಮಿಠಾಯಿ(ಕಾಟನ್ ಕ್ಯಾಂಡಿ) ಮಾರುತ್ತಿದ್ದ ವೃದ್ಧೆಯ ಬಳಿಗೆ ಕರೆದೊಯ್ದಳು.ಎಲ್ಲರೂ ಕ್ಯಾಂಡಿ ಸವಿದರು. ಅದು ಕಳೆದ ವರ್ಷಕ್ಕಿಂತ ಮತ್ತಷ್ಟು ರುಚಿಕರವಾಗಿತ್ತು.

ಪ್ರತಿನಿತ್ಯದಂತೆ ಇಂದೂ ಸಹ ಬೇಗನೆ ಕಳೆಯಿತು. ಖರೀದಿಸಲು ಬೇಕಾದ ಎಲ್ಲಾ ವಸ್ತುಗಳನ್ನು ನೋಡುವುದು ಮತ್ತು ಉತ್ತಮ ಪರಿಮಳದಿಂದ ಆಹಾರ ಖಾದ್ಯವನ್ನು ಹುಡುಕುವುದು ಅವಳ ಹವ್ಯಾಸ. ಬೀನ್ ಕೇಕ್‌ಗಳಿಂದ ಹಿಡಿದು ಚಿಲಿಪಿಲಿ ಮಾಡುವ ಕ್ರಿಕೆಟ್‌ಗಳವರೆಗೆ ಎಲ್ಲವನ್ನೂ ಮಾರಾಟ ಮಾಡುವ ವಿವಿಧ ರೀತಿಯ ಅಂಗಡಿಗಳು ಅಲ್ಲಿದ್ದವು. ಅವಳಿಗೆ ಬೇಸರ ತರಿಸುತ್ತಿದ್ದುದೆಂದರೆ, ಬಿಳಿ ಗುರುತುಗಳನ್ನು ಹೊಂದಿರುವ ಜನರನ್ನು ನೋಡುವುದು. ಪರಮಾಣು ಬಾಂಬ್ ಅವರನ್ನು ಎಷ್ಟು ಕೆಟ್ಟದಾಗಿ ಸುಟ್ಟುಹಾಕಿತ್ತೆಂದರೆ ಅವರು ಈಗ ಮನುಷ್ಯರಂತೆ ಕಾಣುತ್ತಿರಲಿಲ್ಲ. ಬಾಂಬ್ ಬಲಿಪಶುಗಳಲ್ಲಿ ಯಾರಾದರೂ ಸಡಾಕೊ ಬಳಿ ಬಂದರೆ, ಅವಳು ಬೇಗನೆ ದೂರ ಸರಿಯುತ್ತಿದ್ದಳು..

ದಿನದ ಸೂರ್ಯ ಮುಳುಗುತ್ತಿದ್ದಂತೆ ಉತ್ಸಾಹ ಹೆಚ್ಚಾಗುತ್ತಿತ್ತು. ಆಕಾಶದಿಂದ ಕೊನೆಯ ಅದ್ಭುತ ಪಟಾಕಿ ಪ್ರದರ್ಶನವು ಮರೆಯಾದಾಗ, ಜನ ಗುಂಪು ಗುಂಪಾಗಿ ಕಾಗದದ ಲಾಟೀನುಗಳನ್ನು ಹಿಡಿದುಕೊಂಡು ಒಹ್ತಾ ನದಿಯ ದಡದೆಡೆಗೆ ನಡೆದರು..

ಶ್ರೀ ಸಸಾಕಿ ಆರು ಲ್ಯಾಂಟರ್ನ್‌ಗಳ ಒಳಗೆ ಎಚ್ಚರಿಕೆಯಿಂದ ಮೇಣದಬತ್ತಿಗಳನ್ನು ಬೆಳಗಿಸಿದರು - ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಒಂದರಂತೆ. ಲ್ಯಾಂಟರ್ನ್‌ಗಳು ಥಂಡರ್‌ಬೋಲ್ಟ್‌ನಿಂದ ಸಾವನ್ನಪ್ಪಿದ ಸಂಬಂಧಿಕರ ಹೆಸರುಗಳನ್ನು ಹೊಂದಿದ್ದವು. ಸಡಾಕೊ ತನ್ನ ಲ್ಯಾಂಟರ್ನ್‌ನ ಬದಿಯಲ್ಲಿ ಓಬಾ ಚಾನ್ ಹೆಸರನ್ನು ಬರೆದಿದ್ದಳು. ಮೇಣದಬತ್ತಿಗಳು ಪ್ರಕಾಶಮಾನವಾಗಿ ಉರಿಯುತ್ತಿರುವಾಗ, ಲ್ಯಾಂಟರ್ನ್‌ಗಳನ್ನು ಒಹ್ತಾ ನದಿಯಲ್ಲಿ ಹರಿಯಬಿಡಲಾಯಿತು. ಅವು ಕತ್ತಲೆಯನ್ನು ಸೀಳಿ ಮಿಂಚುಹುಳುಗಳ ಗುಂಪಿನಂತೆ ನೀರಿನ ಮೇಲೆ ತೇಲುತ್ತಿದ್ದವು.

ಆ ರಾತ್ರಿ ಸಡಾಕೊ ಬಹಳ ಹೊತ್ತಿನವರೆವಿಗೂಮಲಗದೆ, ದಿನದ ಎಲ್ಲ ಘಟನೆಗಳನ್ನು ನೆನಪಿಸಿಕೊಂಡಳು. ಮಸಾಹಿರೋ ತಪ್ಪು ಮಾಡಿದ್ದಾನೆಂದು ಅವಳು ಭಾವಿಸಿದಳು. ಜೇಡ ಇಂದು ನನಗೆ ಅದೃಷ್ಟವನ್ನು ತಂದಿದೆ. ನಾಳೆ, ಅವಳು ಅವನಿಗೆ ಇದರ ಬಗ್ಗೆ ನೆನಪಿಸಬೇಕೆಂದುಕೊಂಡಳು.

3
ಸಡಕೋಳ ರಹಸ್ಯ

ಅದು ಶರತ್ಕಾಲದ ಆರಂಭದ ದಿನಗಳು. ಸಡಾಕೊ ಶುಭ ಸುದ್ದಿಯೊಂದಿಗೆ ಶಾಲೆಯಿಂದ ಮನೆಗೆ ಧಾವಿಸಿದಳು. ಅವಳು ತನ್ನ ಬೂಟುಗಳನ್ನು ಒಗೆದು ಬಾಗಿಲು ತಳ್ಳಿ. ನಾನು ಮನೆಗೆ ಬಂದಿದ್ದೇನೆ!" ಎಂದು ಕೂಗಿದಳು.

ಅವಳ ತಾಯಿ ಅಡುಗೆಮನೆಯಲ್ಲಿ ರಾತ್ರಿ ಊಟ ತಯಾರಿಸುತ್ತಿದ್ದರು. "ಅತ್ಯಂತ ಅದ್ಭುತವಾದ ಘಟನೆ ಸಂಭವಿಸಿದೆ!"

ಸಡಾಕೊ ಉಸಿರುಗಟ್ಟಿಸುತ್ತಾ ಹೇಳಿದಳು. "ಏನೆಂದು ಊಹಿಸಿ, ನೋಡೋಣ" "ಸಡಕೋ ಚಾನ್, ನಿನಗೆ ಅನೇಕ ಅದ್ಭುತವಾದ ವಿಷಯಗಳು ಸಂಭವಿಸುತ್ತವೆ. ನನಗೆ ಊಹಿಸಲೂ ಸಾಧ್ಯವಿಲ್ಲ."

"ಫೀಲ್ಡ್ ಡೇಯಲ್ಲಿ ದೊಡ್ಡ ಓಟ!" ಸಡಾಕೊ ಹೇಳಿದಳು. "ನನ್ನನ್ನು ಬ್ಯಾಂಬೂ ಕ್ಲಾಸ್ ನಿಂದ ರಿಲೇ ತಂಡದಲ್ಲಿ ಸೇರಿಸಿಕೊಳ್ಳಲು ಆಯ್ಕೆ ಮಾಡಲಾಗಿದೆ," ಅವಳು ಕೋಣೆಯ ಸುತ್ತಲೂ ಕುಣಿದಾಡುತ್ತಾ, ತನ್ನ ಶಾಲಾ ಚೀಲವನ್ನು ಸಂತೋಷದಿಂದ ತೂಗಾಡಿಸುತ್ತಿದ್ದಳು. "ನಾವು ಗೆದ್ದರೆ, ಮುಂದಿನ ವರ್ಷ ಜೂನಿಯರ್ ಹೈಸ್ಕೂಲ್‌ನಲ್ಲಿ ನಾನು ಖಂಡಿತವಾಗಿಯೂ ತಂಡಕ್ಕೆ ಸೇರುತ್ತೇನೆ." ಸಡಾಕೊಗೆ ಇದಕ್ಕಿಂತಾ ಬೇರೇನೂ ಬೇಕಾಗಿರಲಿಲ್ಲ!.

ರಾತ್ರಿ ಊಟದ ಸಮಯದಲ್ಲಿ ಶ್ರೀ ಸಸಾಕಿ ಕುಟುಂಬದ ಗೌರವ ಮತ್ತು ಹೆಮ್ಮೆಯ ಬಗ್ಗೆ ದೀರ್ಘ ಭಾಷಣ ಮಾಡಿದರು. ಮಸಾಹಿರೋ ಇದರಿಂದ ಪ್ರಭಾವಿತನಾದನು. ಸಡಾಕೊ ತಿನ್ನಲು ತುಂಬಾ ಉತ್ಸುಕಳಾಗಿದ್ದಳು. ಅವಳು ಅಲ್ಲಿಯೇ ಕುಳಿತು ಸಂತೋಷದಿಂದ ನಕ್ಕಳು.

ಅಂದಿನಿಂದ ಸಡಾಕೊ ಒಂದೇ ಒಂದು ವಿಷಯದ ಬಗ್ಗೆ ಯೋಚಿಸಲು ಪ್ರಾರಂಭಿಸಿದಳು - ರಿಲೇ ಓಟ. ಅವಳು ಶಾಲೆಯಲ್ಲಿ ಪ್ರತಿದಿನ ಅಭ್ಯಾಸ ಮಾಡುತ್ತಿದ್ದಳು ಮತ್ತು ಆಗಾಗ್ಗೆ ಮನೆಯವರೆವಿಗೂ ಓಡಿಕೊಂಡೇ ಬರುತ್ತಿದ್ದಳು. ಮಸಾಹಿರೋ ಅಪ್ಪ ತಂದುಕೊಟ್ಟ ದೊಡ್ಡ ಗಡಿಯಾರದಿಂದ ಅವಳ ಓಟದ ಅವಧಿ ಗಮನಿಸಿದಾಗ, ಸಡಾಕೊಳ ವೇಗ ಎಲ್ಲರನ್ನೂ ಆಶ್ಚರ್ಯಗೊಳಿಸಿತು. ಬಹುಶಃ, ತಾನು ಇಡೀ ಶಾಲೆಯಲ್ಲಿ ಅತ್ಯುತ್ತಮ ಓಟಗಾರಳಾಗುತ್ತೇನೆ ಎಂದು ಅವಳು ಕನಸು ಕಂಡಿದ್ದಳು.

ಕೊನೆಗೂ ಆ ಮಹತ್ವದ ದಿನ ಬಂದೇ ಬಿಟ್ಟಿತು. ಕ್ರೀಡಾಕೂಟಗಳನ್ನು ವೀಕ್ಷಿಸಲು ಪೋಷಕರು, ಸಂಬಂಧಿಕರು ಮತ್ತು ಸ್ನೇಹಿತರ ಗುಂಪು ಗುಂಪಾಗಿ ಶಾಲೆಯಲ್ಲಿ ಜಮಾಯಿಸಿದರು. ಸಡಾಕೊ ತುಂಬಾ ಆತಂಕಕ್ಕೊಳಗಾಗಿ, ತನ್ನ ಕಾಲುಗಳು ಕೆಲಸ ಮಾಡುವುದೇ ಇಲ್ಲವೇನೋ ಎನ್ನುವ ಮಟ್ಟಕ್ಕೆ ಅವಳು ಹೆದರಿದ್ದಳು. ಇತರ ತಂಡದ ಸದಸ್ಯರು ಇದ್ದಕ್ಕಿದ್ದಂತೆ ತನ್ನ ತಂಡದ ಆಟಗಾರರಿಗಿಂತ ಎತ್ತರವಾಗಿ ಮತ್ತು ಬಲಶಾಲಿಯಾಗಿ ಕಾಣುತ್ತಿದ್ದರು.

ಸಡಾಕೊ ತನ್ನ ತಾಯಿಗೆ ತನ್ನ ಭಾವನೆಗಳನ್ನು ಹಂಚಿಕೊಂಡಾಗ, ಶ್ರೀಮತಿ ಸಸಕಿ, "ಸಡಾಕೊ ಚಾನ್ , ಸ್ವಲ್ಪ ಭಯ ಆಗುವುದು ಸಹಜ. ಆದರೆ ಚಿಂತಿಸಬೇಡ. ನೀನು ಅಲ್ಲಿಗೆ ಹೋದಾಗ, ನೀನು ಸಾಧ್ಯವಾದಷ್ಟು ವೇಗವಾಗಿ ಓಡುತ್ತೀಯೆ" ಎಂದು ಧೈರ್ಯ ತುಂಬಿದರು.

ನಂತರ ರಿಲೇ ಓಟದ ಸಮಯ ಬಂದೇ ಬಿಟ್ಟಿತು.

"ನಿನ್ನ ಅತ್ಯುತ್ತದ ಪದರ್ಶನ ನೀಡು" ಶ್ರೀ ಸಸಾಕಿ ಸಡಕೋ ಅವರ ಕೈಯನ್ನು ಹಿಸುಕುತ್ತಾ ಹೇಳಿದರು. "ನಾವು ನಿನ್ನ ಬಗ್ಗೆ ಹೆಮ್ಮೆಪಡುತ್ತೇವೆ."

“ತಮ್ಮ ಹೆತ್ತವರ ಧೈರ್ಯದ ಮಾತುಗಳು ಸಡಕೋಳ ಹುರಿದುಂಬಿಸಿ, ಆತಂಕ ದೂರಮಾಡಿದವು. ಏನೇ ಆದರೂ ಅವರು ನನ್ನನ್ನು ಪ್ರೀತಿಸುತ್ತಾರೆ" ಎಂದು ಅವಳು ಭಾವಿಸಿದಳು.

ಓಟ ಪ್ರಾರಂಭಿಸಲು ಸಿಗ್ನಲ್ ಕೊಟ್ಟಾಗ, ಸಡಾಕೊ ಓಟವನ್ನು ಹೊರತುಪಡಿಸಿ ಉಳಿದೆಲ್ಲವನ್ನೂ ಮರೆತಳು. ತನ್ನ ಸರದಿ ಬಂದಾಗ, ಅವಳು ತನ್ನೆಲ್ಲ ಶಕ್ತಿಯಿಂದ ಓಡಿದಳು. ಓಟ ಮುಗಿದಾಗಲೂ ಸಡಾಕೊಳ ಹೃದಯವು ಅವಳ ಪಕ್ಕೆಲುಬುಗಳ ಮೇಲೆ ನೋವಿನಿಂದ ಬಡಿಯುತ್ತಿತ್ತು.

ಆಗ ಅವಳಿಗೆ ಮೊದಲು ವಿಚಿತ್ರ ಮತ್ತು ತಲೆತಿರುಗುವಿಕೆ ಅನುಭವವಾಯಿತು. "ನಿಮ್ಮ ತಂಡ ಗೆದ್ದಿತು!" ಎಂದು ಯಾರೋ ಕೂಗುವುದು ಅವಳಿಗೆ ಕೇಳಿಸಲೇ ಇಲ್ಲ. ಬ್ಯಾಂಬೂ ಕ್ಲಾಸ್ ವ ಸ್ನೇಹಿತರು ಸಡಕೋಳನ್ನು ಸುತ್ತುವರೆದು, ಹರ್ಷೋದ್ಗಾರ ಮಾಡುತ್ತಾ ಇದ್ದರು. ಅವಳು ಕೆಲವೊಮ್ಮೆ ತಲೆ ಅಲ್ಲಾಡಿಸಿದಳು ನಂತರ ಮತ್ತು ತಲೆತಿರುಗುವಿಕೆ ಮಾಯವಾಯಿತು.

ಚಳಿಗಾಲದುದ್ದಕ್ಕೂ ಸಡಾಕೊ ತನ್ನ ಓಟದ ವೇಗವನ್ನು ಸುಧಾರಿಸಲು ಪ್ರಯತ್ನಿಸಿದಳು. ಜೂನಿಯರ್ ಹೈನಲ್ಲಿ ರೇಸಿಂಗ್ ತಂಡಕ್ಕೆ ಅರ್ಹತೆ ಪಡೆಯಲು ಅವಳು ಪ್ರತಿದಿನ ಅಭ್ಯಾಸ ಮಾಡಲೇ ಬೇಕಾಗಿತ್ತು. ಕೆಲವೊಮ್ಮೆ ದೀರ್ಘ ಓಟದ ನಂತರ ತಲೆತಿರುಗುವಿಕೆ ಮರುಕಳಿಸುತ್ತಿತ್ತು. ಸಡಾಕೊ ತನ್ನ ಕುಟುಂಬಕ್ಕೆ ಇದರ ಬಗ್ಗೆ ಹೇಳದಿರಲು ನಿರ್ಧರಿಸಿದಳು.

ತಲೆತಿರುಗುವಿಕೆ ಇಂದಲ್ಲ ನಾಳೆ ಹೊರಟು ಹೋಗುತ್ತದೆ ಎಂದು ಅವಳು ಸ್ವಯಂ ಸಾಂತ್ವನಗೊಳಿಸಿಕೊಳ್ಳಲು ಪ್ರಯತ್ನಿಸಿದಳು. ಆದರೆ ಅದು ಆಗಲಿಲ್ಲ. ಬದಲಾಗಿ ಇನ್ನಷ್ಟು ಹದಗೆಟ್ಟಿತು. ಭಯಭೀತಳಾದ ಸಡಾಕೊ ತನ್ನೊಳಗೆ ಆ ರಹಸ್ಯವನ್ನು ಹೊತ್ತುಕೊಂಡಳು. ಅವಳು ತನ್ನ ಆತ್ಮೀಯ ಸ್ನೇಹಿತೆ ಚಿಜುಕೊಗೂ ಸಹ ಇದನ್ನು ಹೇಳಲಿಲ್ಲ.

ಹೊಸ ವರ್ಷದ ಮುನ್ನಾದಿನದಂದು ಸಡಕೋ ತನ್ನ ತಲೆತಿರುಗುವಿಕೆಯಿಂದ ಉಂಟಾಗುವ ತೊಂದರೆಗಳನ್ನು ಮಾಂತ್ರಿಕವಾಗಿ ದೂರ ಮಾಡಬಹುದೆಂದು ಬಹುವಾಗಿ ಆಶಿಸಿದಳು. ಈ ರಹಸ್ಯ ಅವಳಲ್ಲಿ ಇಲ್ಲದಿದ್ದರೆ ಎಲ್ಲವೂ ಎಷ್ಟು ಪರಿಪೂರ್ಣವಾಗುತ್ತಿತ್ತು! ಮಧ್ಯರಾತ್ರಿಯಲ್ಲಿ ಅವಳು ತನ್ನ ಹಾಸಿಗೆಯಲಿ ಮಲಗಿದ್ದಾಗ ದೇವಾಲಯದ ಗಂಟೆಗಳು ಮೊಳಗಲು ಪ್ರಾರಂಭಿಸಿದವು. ಹಳೆಯ ವರ್ಷದ ಕೆಡುಕುಗಳನ್ನು ಹೊರದಬ್ಬಿ ಹೊಸ ವರ್ಷವು ಉತ್ತಮ ಆರಂಭವನ್ನು ಹೊಂದುವಂತೆ ಆ ಗಂಟೆಗಳು ಮೊಳಗುತ್ತಿದ್ದವು. ಪ್ರತಿಯೊಂದು ಘಂಟಾನಾದದೊಂದಿಗೆ ಸಡಕೋ ನಿದ್ರಾವಸ್ಥೆಯಲ್ಲಿದ್ದರೂ ತನ್ನ ವಿಶೇಷ ಆಶಯವನ್ನು ಮಂಡಿಸಿದಳು.

ಮರುದಿನ ಬೆಳಿಗ್ಗೆ ಸಸಾಕಿ ಕುಟುಂಬವು ದೇವಾಲಯಗಳಿಗೆ ಭೇಟಿ ನೀಡುತ್ತಿದ್ದ ತಮ್ಮ ಜನರ ಗುಂಪಿನೊಂದಿಗೆ ಸೇರಿಕೊಂಡಿತು. ಶ್ರೀಮತಿ ಸಸಾಕಿ ತಮ್ಮ ರೇಷ್ಮೆ ಹೂಗಳ ಅತ್ಯುತ್ತಮ ಕಿಮೋನೊದಲ್ಲಿ ಸುಂದರವಾಗಿ ಕಾಣುತ್ತಿದ್ದರು.

“ನಾನು ಹಣ ಹೊಂದಿಕೊಂಡ ದಿನ , ನಿನಗಾಗಿ ಒಂದು ಕಿಮೋನೊ ಖರೀದಿಸುತ್ತೇನೆ," ಅವಳು ಸಡಕೋಗೆ ಭರವಸೆ ನೀಡಿದಳು. "ನಿನ್ನ ವಯಸ್ಸಿನ ಹುಡುಗಿಗೆ ಅದು ಅಗತ್ತಯವಾಗಿ ಬೇಕು."

ಸಡಾಕೊ ತನ್ನ ತಾಯಿಗೆ ಆತ್ಮೀಯವಾಗಿ ಧನ್ಯವಾದ ಹೇಳಿದಳು, ಆದರೆ ಅವಳಿಗೆ ಕಿಮೋನೊ ಬಗ್ಗೆ ಕಾಳಜಿ ಇರಲಿಲ್ಲ. ಜೂನಿಯರ್ ಹೈನಲ್ಲಿ ತಂಡದೊಂದಿಗೆ ರೇಸಿಂಗ್ ಮಾಡುವುದರ ಬಗ್ಗೆ ಮಾತ್ರ ಅವಳ ಗಮನವಿದಿದ್ದು!

ಸಂತೋಷದ ಜನರ ಗುಂಪಿನ ನಡುವೆ ಸಡಾಕೊ ಸ್ವಲ್ಪ ಸಮಯದವರೆಗೆ ತನ್ನ ರಹಸ್ಯವನ್ನು ಮರೆತಳು. ಹಬ್ಬದ ಸಡಗರದಿಂದ ತನ್ನ ಚಿಂತೆಗಳನ್ನು ದೂರ ಮಾಡಿ ಅವಳು ಮಸಾಹಿರೊ ಜೊತೆಗೆ ಮನೆಗೆ ಓಟದ ಸ್ಪರ್ಧೆಮಾಡಿ ಸುಲಭವಾಗಿ ಗೆದ್ದಳು. ಮನೆಗೆ ತಲುಪಿದಾಗ ಹೊಸ ವರ್ಷದಲ್ಲಿ ಅವರನ್ನು ರಕ್ಷಿಸಲು ಶ್ರೀಮತಿ ಸಸಾಕಿ ಇಟ್ಟಿದ್ದ ಅದೃಷ್ಟದ ಸಂಕೇತಗಳು ಬಾಗಿಲಿನ ಮೇಲೆ ನಗುತ್ತಿದ್ದವು!.

ಈ ರೀತಿಯ ಆರಂಭದಿಂದ, ಏನಾದರೂ ಕೆಟ್ಟದು ಸಂಭವಿಸಲು ಹೇಗೆ ಸಾಧ್ಯ?

4.

ರಟ್ಟಾದ ರಹಸ್ಯ

ಹಲವಾರು ದಿನಗಳವರೆಗೆ ಪ್ರಾರ್ಥನೆಗಳು ಮತ್ತು ಶುಭ ಸಂಕೇತಗಳು ತಮ್ಮ ಕೆಲಸವನ್ನು ಉತ್ತಮವಾಗಿ ನಿರ್ವಹಿಸಿರುವಂತೆ ತೋರುತ್ತಿತ್ತು. ಸಡಾಕೊ ಹೆಚ್ಚು ಸಮಯ ಅಭ್ಯಾಸ ಮಾಡಿ ವೇಗವಾಗಿ ಓಡುತ್ತಿದ್ದಂತೆ ಬಲಶಾಲಿಯಾದಳಲ್ಲದೆ, ಮತ್ತು ಆರೋಗ್ಯ ವಾಗಿಯೂ ಇದ್ದಳು.

ಆದರೆ ಅದೆಲ್ಲವೂ ಫೆಬ್ರವರಿಯ ಒಂದು ಚಳಿಗಾಲದ ದಿನದಂದು ಕೊನೆಗೊಂಡಿತು. ಸಡಾಕೊ ಶಾಲೆಯ ಅಂಗಳದಲ್ಲಿ ಓಡುತ್ತಿದ್ದಳು. ಇದ್ದಕ್ಕಿದ್ದಂತೆ ಎಲ್ಲವೂ ಅವಳ ಸುತ್ತ ಸುತ್ತುತ್ತಿರುವಂತೆ ತೋರಿ ಅವಳು ನೆಲಕ್ಕೆ ಕುಸಿದಳು. ಶಿಕ್ಷಕರೊಬ್ಬರು ಸಹಾಯ ಮಾಡಲು ಧಾವಿಸಿದರು.

"ನಾನು... ನಾನು ಸುಸ್ತಾಗಿದ್ದೇನೆ" ಸಡಾಕೊ ದುರ್ಬಲ ಧ್ವನಿಯಲ್ಲಿ ಹೇಳಿದಳು. ಅವಳು ಎದ್ದೇಳಲು ಪ್ರಯತ್ನಿಸಿದಾಗ, ಅವಳ ಕಾಲುಗಳು ನಡುಗಿದವು ಮತ್ತು ಅವಳು ಮತ್ತೆ ಕೆಳಗೆ ಬಿದ್ದಳು. ಶಿಕ್ಷಕರು ಮಿಸ್ಟರ್ ಅವರನ್ನು ಶ್ರೀ ಸಸಾಕಿಗೆ ಹೇಳಲು ಮನೆಗೆ ಕಳುಹಿಸಿದರು.

ಅವನು ತನ್ನ ಹೇರ್ ಕಟ್ಟ ಅಂಗಡಿಯಿಂದ ತತ್ ಕ್ಷಣ ಹೊರಟುಬಂದು ಸಡಾಕೊಳನ್ನು ರೆಡ್ ಕ್ರಾಸ್ ಆಸ್ಪತ್ರೆಗೆ ಕರೆದೊಯ್ದರು. ಆಸ್ಪತ್ರೆ ಕಟ್ಟಡವನ್ನು ಪ್ರವೇಶಿಸುತ್ತಿದ್ದಂತೆ ಸಡಾಕೊಗೆ ಭಯವುಂಟಾಯಿತು. ಈ ಆಸ್ಪತ್ರೆಯ ಒಂದು ಭಾಗವು ವಿಶೇಷವಾಗಿ ಪರಮಾಣು ಬಾಂಬ್ ಕಾಯಿಲೆಯಿಂದ ಬಳಲುತ್ತಿರುವವರಿಗೆ ಮಾತ್ರ.

ಕೆಲವು ನಿಮಿಷಗಳ ನಂತರ ಸಡಾಕೊ ಪರೀಕ್ಷಾ ಕೊಠಡಿಯಲ್ಲಿದ್ದಳು, ಅಲ್ಲಿನ ನರ್ಸ್ ಅವಳ ಎದೆಯ ಎಕ್ಸ್-ರೇ ತೆಗೆದು, ಸ್ವಲ್ಪ ರಕ್ತ ತೆಗೆದುಕೊಂಡಳು. ಡಾ. ನುಮಾಟಾ ಅವಳ ಬೆನ್ನು ತಟ್ಟಿ ಬಹಳಷ್ಟು ಪ್ರಶ್ನೆಗಳನ್ನು ಕೇಳಿದರು. ಸಡಾಕೊಳನ್ನು ಪರೀಕ್ಷಿಸಲು ಇತರ ಮೂವರು ವೈದ್ಯರು ಬಂದರು.

ಈ ಹೊತ್ತಿಗೆ ಸಡಾಕೊಳ ಕುಟುಂಬದ ಉಳಿದವರೆಲ್ಲರೂ ಆಸ್ಪತ್ರೆಯಲ್ಲಿದ್ದರು. ಆಕೆಯ ಪೋಷಕರು ವೈದ್ಯರ ಕಚೇರಿಯಲ್ಲಿದ್ದರು. ಸಡಾಕೊಗೆ ಅವರ ಧ್ವನಿಯ ಗೊಣಗಾಟ ಕೇಳಿಸುತ್ತಿತ್ತು. ಒಮ್ಮೆ ಆಕೆಯ ತಾಯಿ "ಲ್ಯುಕೇಮಿಯಾ! ಆದರೆ ಅದು ಅಸಾಧ್ಯ!" ಎಂದು ಅಳುತ್ತಿರುವುದು ಕೇಳಿತು, ಆ ಭಯಾನಕ ಪದದ ಶಬ್ದ ಕೇಳಿದಾಗ ಸಡಾಕೊ ತನ್ನ ಕೈಗಳಿಂದ ಕಿವಿಗಳನ್ನು ಮುಚ್ಚಿಕೊಂಡಳು.

ಅವಳು ಇನ್ನು ಮುಂದೆ ಏನನ್ನೂ ಕೇಳಲು ಬಯಸಲಿಲ್ಲ. ಖಂಡಿತ ಅವಳಿಗೆ ಲ್ಯುಕೇಮಿಯಾ ಇರಲಿಲ್ಲ. ಏಕೆಂದರೆ, ಪರಮಾಣು ಬಾಂಬ್ ಅವಳನ್ನು ನೇರವಾಗಿ ಘಾಸಿಗೊಳಿಸಿರಲಿಲ್ಲ.

ನರ್ಸ್ ಯಸುನಾಗ ಸಡಾಕೊಳನ್ನು ಆಸ್ಪತ್ರೆಯ ಒಂದು ಕೋಣೆಗೆ ಕರೆದೊಯ್ದು ಧರಿಸಲು ಒಂದು ರೀತಿಯ ಹತ್ತಿ ಕಿಮೋನೊ ಕೊಟ್ಟಳು. ಆಕೆಯ ಕುಟುಂಬ ಒಳಗೆ ಬಂದಾಗ ಸಡಾಕೊ ಹಾಸಿಗೆ ಹತ್ತಿದ್ದಳು.

ಶ್ರೀಮತಿ ಸಸಾಕಿ ಸಡಾಕೊಳನ್ನು ತಮ್ಮ ತೋಳುಗಳಿಂದ ಬಳಸಿ, "ನೀನು ಸ್ವಲ್ಪ ದಿನಗಳು ಇಲ್ಲೇ ಇರಬೇಕು," ಅವಳು ಹರ್ಷಚಿತ್ತದಿಂದ ಧ್ವನಿಸಲು ಪ್ರಯತ್ನಿಸುತ್ತಾ ಹೇಳಿದಳು, "ಆದರೆ ನಾನು ಪ್ರತಿ ಸಂಜೆ ಬರುತ್ತೇನೆ."

"ಮತ್ತು ನಾವು ಶಾಲೆಯ ನಂತರ ನಿಮ್ಮನ್ನು ಭೇಟಿ ಮಾಡುತ್ತೇವೆ," ಮಸಾಹಿರೋ ಭರವಸೆ ನೀಡಿದ.

ಮಿಟ್ಸು ಮತ್ತು ಈಜಿ ತಲೆಯಾಡಿಸಿದರು, ಅವರ ಕಣ್ಣುಗಳು ಭಯಭೀತವಾಗಿದ್ದವು.

"ನನಗೆ ನಿಜವಾಗಿಯೂ ಪರಮಾಣು ಬಾಂಬ್ ಕಾಯಿಲೆ ಇದೆಯೇ?" ಸಡಾಕೊ ತನ್ನ ತಂದೆಯನ್ನು ಕೇಳಿದಳು.

ಶ್ರೀ ಸಸಾಕಿಯವರ ಕಣ್ಣುಗಳಲ್ಲಿ ಒಂದು ಕಳವಳದ ನೋಟವಿತ್ತು, ಆದರೆ ಅವರು "ವೈದ್ಯರು ಕೆಲವು ಪರೀಕ್ಷೆಗಳನ್ನು ಮಾಡಲು ಬಯಸುತ್ತಾರೆ - ಅಷ್ಟೇ" ಎಂದು ಮಾತ್ರ ಹೇಳಿದರು.ಅವರು ಸ್ವಲ್ಪ ಹೊತ್ತು ತಡೆದು, "ಅವರು ನಿನ್ನನ್ನು ಕೆಲವು ವಾರಗಳ ಕಾಲ ಇಲ್ಲಿಯೇ ಇಟ್ಟುಕೊಳ್ಳಬಹುದು" ಎಂದು ಹೇಳಿದರು.

ಕೆಲವು ವಾರಗಳು! ಸಡಕೋಗೆ ಅದು 'ಕೆಲವು ವರ್ಷ'ಗಳಂತೆ ಕೇಳಿಸಿತು. ಜೂನಿಯರ್ ಹೈಸ್ಕೂಲ್‌ಗೆ ಅರ್ಹತೆ ಪಡೆಯುವ ಅವಕಾಶ ಅವಳಿಗೆ ತಪ್ಪಿಹೋಗುತ್ತಿತ್ತು. ಇನ್ನೂ ಬೇಸರದ ಸಂಗತಿಯೆಂದರೆ, ಅವಳು ರೇಸಿಂಗ್ ತಂಡದ ಭಾಗವಾಗಿರುತ್ತಿರಲಿಲ್ಲ. ಸಡಕೋ ಒತ್ತಿ ಬರುತ್ತಿದ್ದ ಅಳವನ್ನು ನುಂಗಲು ಪ್ರಯತ್ನಿಸಿದಳು.

ಶ್ರೀಮತಿ ಸಸಾಕಿ ಸಡಾಕೊ ಬಗ್ಗೆ ಅತಿ ಕಾಳಜಿ ತೋರಿ ಅವಳ ದಿಂಬುಗಳನ್ನು ಸರಿಪಡಿಸಿ ಹಾಸಿಗೆಯ ಹೊದಿಕೆಯನ್ನು ಸರಿಗೊಳಿಸಿದರು.

ಶ್ರೀ ಸಸಾಕಿ ತಮ್ಮ ಗಂಟಲನ್ನು ಸರಿಪಡಿಸಿಕೊಂಡರು. "... ನಿನಗೆ ಏನಾದರೂ ಬೇಕೇ?"

ಸಡಾಕೊ ತಲೆ ಅಲ್ಲಾಡಿಸಿದಳು. ಅವಳು ನಿಜವಾಗಿಯೂ ಬಯಸಿದ್ದು ಮನೆಗೆ ಹೋಗುವುದೊಂದೇ. ಆದರೆ ಯಾವಾಗ? ಅವಳಿಗೆ ಭಯ ಶುರುವಾಯಿತು. ಈ ಆಸ್ಪತ್ರೆಗೆ ಬಂದ ಅನೇಕ ಜನರು ಎಂದಿಗೂ ಜೀವಂತವಾಗಿ ಹೊರಗೆ ಹೋಗಿರಲಿಲ್ಲ ಎಂದು ಅವಳು ಕೇಳಿದ್ದಳು.

ನಂತರ ನರ್ಸ್ ಯಸುನಾಗ ಎಲ್ಲರನ್ನು ಹೊರಗೆ ಕಳುಹಿಸಿ ಸಡಕೋಗೆ ವಿಶ್ರಾಂತಿ ಪಡೆಯಲು ತಿಳಿಸಿದಳು. ಸಡಕೋ ಒಬ್ಬಂಟಿಯಾಗಿರುವಾಗ, ದಿಂಬಿನಲ್ಲಿ ಮುಖ ಹೂತುಸಿಕೊಂಡು ಬಹಳ ಹೊತ್ತು ಅಳುತ್ತಿದ್ದಳು. ಅವಳು ಹಿಂದೆಂದೂ ಇಷ್ಟೊಂದು ಒಂಟಿತನ ಮತ್ತು ದುಃಖವನ್ನು ಅನುಭವಿಸಿರಲಿಲ್ಲ.

5.
ಗೋಲ್ಡನ್ ಕ್ರೇನ್

ಮರುದಿನ ಬೆಳಿಗ್ಗೆ ಸಡಾಕೊಗೆ ನಿಧಾನವಾಗಿ ಎಚ್ಚರವಾಯಿತು. ಪ್ರತಿದಿನ ತಾನು ತನ್ನ ತಾಯಿ ಬೆಳಗಿನ ಉಪಾಹಾರ ತಯಾರಿಸುವ ಪರಿಚಿತ ಶಬ್ದಗಳನ್ನು ಅವಳು ಕೇಳುತ್ತಿದ್ದಳು, ಆದರೆ ಇಂದು ಆಸ್ಪತ್ರೆಯ ಹೊಸ ಮತ್ತು ವಿಭಿನ್ನ ಶಬ್ದಗಳು ಮಾತ್ರ ಅವಳಿಗೆ ಕೇಳಿಸುತ್ತಿದ್ದವು. ಸಡಾಕೊ ನಿಟ್ಟುಸಿರು ಬಿಟ್ಟಳು. ನಿನ್ನೆ ಒಂದು ಕೇವಲ ಕೆಟ್ಟ ಕನಸು ಎಂದು ಅವಳು ಆಶಿಸಿದ್ದಳು. ನರ್ಸ್ ಯಸುನಾಗ ಅವಳಿಗೆ ಚುಚ್ಚುಮದ್ದು ನೀಡಲು ಬಂದಾಗ ಅದು ಇನ್ನಷ್ಟು ನಿಚ್ಚಳವಾಯ್ತು.

"ಚುಚ್ಚುಮದ್ದು ಪಡೆಯುವುದು ಆಸ್ಪತ್ರೆಯಲ್ಲಿರುವುದರ ಒಂದು ಭಾಗ," ಎಂದು ದಢೂತಿ ನರ್ಸ್ ಚುರುಕಾಗಿ ಹೇಳಿದಳು. "ನೀನು ಅದಕ್ಕೆ ದಿನಕಳೆದಂತೆ ಒಗ್ಗಿಕೊಳ್ಳುತ್ತೀಯ."

"ಈ ಕಾಯಿಲೆ ಇಲ್ಲಿಗೆ ಮುಗಿಯಲಿ ಅಂತ ನಾನು ಬಯಸುತ್ತೇನೆ," ಎಂದು ಸಡಾಕೊ ಅತೃಪ್ತಿಯಿಂದ ಹೇಳಿದಳು, "ಆದ್ದರಿಂದ ನಾನು ಮನೆಗೆ ಹೋಗಬಹುದು."

ಆ ಮಧ್ಯಾಹ್ನ ಚಿಜುಕೊ ಸಡಾಕೊಳನ್ನು ಭೇಟಿ ಮಾಡಲು ಬಂದ ಮೊದಲ ಅತಿಥಿ. ಅವಳು ತನ್ನ ಬೆನ್ನ ಹಿಂದೆ ಏನೋ ಹಿಡಿದುಕೊಂಡು ನಿಗೂಢವಾಗಿ ಮುಗುಳ್ನಕ್ಕು, "ನಿನ್ನ ಕಣ್ಣುಗಳನ್ನು ಮುಚ್ಚು" ಎಂದು ಹೇಳಿದಳು. ಸಡಾಕೊ ತನ್ನ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿಕೊಂಡಾಗ, ಚಿಜುಕೊ ಹಾಸಿಗೆಯ ಮೇಲೆ ಕೆಲವು ಕಾಗದ ಮತ್ತು ಕತ್ತರಿಗಳನ್ನು ಹಾಕಿದಳು. "ಈಗ ನೀನು ಕಣ್ಣು ಬಿಡಬಹುದು" ಎಂದು ಅವಳು ಹೇಳಿದಳು.

"ಏನದು?" ಸಡಾಕೊ ಕಾಗದವನ್ನು ದಿಟ್ಟಿಸುತ್ತಾ ಕೇಳಿದಳು.

ಚಿಜುಕೊ ತನ್ನ ಬಗ್ಗೆ ಸಂತೋಷಪಟ್ಟು "ನೀನು ಗುಣಮುಖಳಾಗಲು ನಾನು ಒಂದು ಮಾರ್ಗವನ್ನು ಕಂಡುಕೊಂಡಿದ್ದೇನೆ," ಅವಳು ಹೆಮ್ಮೆಯಿಂದ ಹೇಳಿದಳು. "ನೋಡು!" ಅವಳು ಚಿನ್ನದ ಕಾಗದದ ತುಂಡನ್ನು ದೊಡ್ಡ ಚೌಕಕ್ಕೆ ಕತ್ತರಿಸಿ ಸ್ವಲ್ಪ ಸಮಯದಲ್ಲೇ ಅದನ್ನು ಒಂದು ಸುಂದರವಾದ ಕ್ರೇನ್ ಆಗಿ ಮಡಿಚಿದಳು!

ಸಡಾಕೊ ಗಲಿಬಿಲಿಗೊಂಡು. "ಆದರೆ ಈ ಕಾಗದದ ಹಕ್ಕಿ ನನ್ನನ್ನು ಹೇಗೆ ಗುಣಪಡಿಸುತ್ತದೆ?"

"ಕ್ರೇನ್ ಬಗ್ಗೆ ಹಳೆಯ ಕಥೆ ನಿನಗೆ ನೆನಪಿಲ್ಲವೇ?" ಚಿಜುಕೊ ಕೇಳಿದಳು. “ಇದು ಸಾವಿರ ವರ್ಷಗಳ ಕಾಲ ಬದುಕಿರುತ್ತದೆ. ಒಬ್ಬ ಅನಾರೋಗ್ಯಪೀಡಿತ ವ್ಯಕ್ತಿಯು ಸಾವಿರ ಕಾಗದದ ಕ್ರೇನ್‌ಗಳನ್ನು ಮಡಿಸಿದರೆ, ದೇವರುಗಳು ಅವರ ಆಸೆಯನ್ನು ಈಡೇರಿಸಿ ಅವರನ್ನು ಮತ್ತೆ ಆರೋಗ್ಯವಂತನನ್ನಾಗಿ ಮಾಡುತ್ತಾರೆ." ಅವಳು ಕ್ರೇನ್ ಅನ್ನು ಸಡಾಕೊಗೆ ಕೊಡುತ್ತಾ "ಇಗೋ ಇದು ನಿನ್ನ ಮೊದಲನೆಯದು!"

ಸಡಕೋಳ ಕಣ್ಣುಗಳು ಕಣ್ಣೀರಿನಿಂದ ತುಂಬಿ ಬಂದವು. ಸದಾಕಾಲ ಅದೃಷ್ಟದ ಮೋಡಿ ತರುವ ಚಿಜುಕೋ ಎಷ್ಟು ಒಳ್ಳೆಯವಳು! ವಿಶೇಷವಾಗಿ ಅವಳ ಸ್ನೇಹಿತೆ ಅಂತಹ ವಿಷಯಗಳಲ್ಲಿ ನಿಜವಾಗಿಯೂ ನಂಬಿಕೆ ಇಲ್ಲದವಳು. ಸಡಕೋ ಚಿನ್ನದ ಕ್ರೇನ್ ಅನ್ನು ತೆಗೆದುಕೊಂಡು ಒಂದು ಹಾರೈಕೆ ಮಾಡಿಕೊಂಡಳು. ಅವಳು ಪಕ್ಷಿಯನ್ನು ಮುಟ್ಟಿದಾಗ ಅವಳ ಮೇಲೆ ಸಣ್ಣ ಭಾವನೆ ಉಂಟಾಯಿತು. ಅದು ಒಳ್ಳೆಯ ಶಕುನವಾಗಿರಬೇಕು.

"ಧನ್ಯವಾದಗಳು, ಚಿಜುಕೊ ಚಾನ್" ಅವಳು ಪಿಸುಗುಟ್ಟಿದಳು. "ನಾನು ಇದನ್ನು ಎಂದಿಗೂ ಬಿಡುವುದಿಲ್ಲ."

ಕಾಗದದಲ್ಲಿ ಕ್ರೇನ್ ಮಡಚಲು ಪ್ರಾರಂಭಿಸಿದಾಗ, ಅದು ಅಂದುಕೊಂಡಷ್ಟು ಸುಲಭವಲ್ಲ ಎಂದು ಸಡಾಕೊ ಕಂಡುಕೊಂಡಳು. ಚಿಜುಕೊ ಸಹಾಯದಿಂದ ಅವಳು ಕಷ್ಟಕರವಾದ ಹಂತಗಳನ್ನು ಹೇಗೆ ಮಾಡಬೇಕೆಂದು ಕಲಿತಳು. ಹತ್ತು ಪಕ್ಷಿಗಳನ್ನು ಮಾಡಿದ ನಂತರ, ಸಡಾಕೊ ಅವುಗಳನ್ನು ಚಿನ್ನದ ಕ್ರೇನ್ ಪಕ್ಕ ಮೇಜಿನ ಮೇಲೆ ಸಾಲಾಗಿ ಇಟ್ಟಳು. ಕೆಲವು ಸ್ವಲ್ಪ ಒರೆಯಾಗಿದ್ದವು, ಆದರೆ ಅದು ಆರಂಭವಾಗಿತ್ತು.

“ಇನ್ನು ನಾನು ಕೇವಲ ಕೇವಲ ಒಂಬತ್ತು ನೂರ ತೊಂಬತ್ತು ಕ್ರೇನ್‌ಗಳನ್ನು ಮಾತ್ರ ಮಾಡಬೇಕಾಗಿದೆ" ಎಂದು ತನ್ನಲ್ಲೇ ಹೇಳಿಕೊಂಡಳು. ಚಿನ್ನದ ಕ್ರೇನ್ ಹತ್ತಿರದಲ್ಲಿಯೇ ಇದ್ದುದರಿಂದ, ಅವಳು ಸುರಕ್ಷಿತ ಮತ್ತು ಅದೃಷ್ಟಶಾಲಿ. ಕೆಲವು ವಾರಗಳಲ್ಲಿ ನಾನು ಸಾವಿರವನ್ನು ಮುಗಿಸಲು ಸಾಧ್ಯವಾಗುತ್ತದೆ. ಆಗ ಮನೆಗೆ ಹೋಗಲು ಸಾಕಷ್ಟು ಬಲಶಾಲಿಯಾಗುತ್ತೇನೆ ಎಂದು ಭಾವಿಸಿದಳು.

ಆ ಸಂಜೆ ಮಸಾಹಿರೋ ಶಾಲೆಯಿಂದ ಸಡಾಕೊಗೆ ಗೃಹಪಾಠ ತಂದನು. ಅವನು ಕ್ರೇನ್‌ಗಳನ್ನು ನೋಡಿದಾಗ, "ಆ ಸಣ್ಣ ಮೇಜಿನ ಮೇಲೆ ನಿಮ್ಮ ಪಕ್ಷಿಗಳನ್ನು ಪ್ರದರ್ಶಿಸಲು ಸಾಕಷ್ಟು ಸ್ಥಳವಿಲ್ಲ. ನಾನು ಅವುಗಳನ್ನು ನಿಮಗಾಗಿ ಛಾವಣಿಯಿಂದ ತೂಗಿ ಬಿಡುತ್ತೇನೆ" ಎಂದು ಹೇಳಿದನು.

ಸಡಾಕೊ ಮೆಲ್ಲಗೆ ನಕ್ಕು "ನಾನು ಮಾಡುವ ಪ್ರತಿಯೊಂದು ಕ್ರೇನ್ ತೂಗಿ ಬಿಡುವುದಾಗಿ ನೀವನು ಭರವಸೆ ನೀಡುತ್ತೀಯಾ?" ಅವಳು ಕೇಳಿದಳು.

ಮಸಾಹಿರೋ ಭರವಸೆ ನೀಡಿದ.

"ಪರವಾಗಿಲ್ಲ!" ಎಂದಳು ಸಡಾಕೊ, ಕಣ್ಣುಗಳು ಕಿಡಿಗೇಡಿತನದಿಂದ ಮಿನುಗುತ್ತಾ. "ಹಾಗಾದರೆ ನೀವು ಇಡೀ ಸಾವಿರವನ್ನು ತೂಗು ಬಿಡುವೆ?"

"ಒಂದು ಸಾವಿರ!" ಅವಳ ಸಹೋದರ ಆಶ್ಚರ್ಯದಿಂದ. "ನೀನು ತಮಾಷೆ ಮಾಡ್ತಿದ್ದೀಯಾ ತಾನೆ?"

ಸಡಾಕೊ ಅವನಿಗೆ ಕ್ರೇನ್‌ಗಳ ಕಥೆಯನ್ನು ಹೇಳಿದಳು.

ಮಸಾಹಿರೋ ತನ್ನ ನೇರವಾದ ಕಪ್ಪು ಕೂದಲಿನ ಮೂಲಕ ಸರಿಗೊಳಿಸುತ್ತಾ "ನೀನು ನನಗೆ ಮೋಸ ಮಾಡಿದೆ!" ಅವನು ನಗುನಗುತ್ತಾ ಮುಂದುವರೆದು, "ಆದರೆ ನಾನು ಅದನ್ನು ಹೇಗಾದರೂ ಮಾಡುತ್ತೇನೆ." ಅವನು ನರ್ಸ್ ಯಸುನಾಗ ರ ಸಹಾಯದಿಂದ ಕೆಲವು ದಾರ ಮತ್ತು ಟ್ಯಾಗ್‌ಗಳನ್ನು ಎರವಲು ಪಡೆದು ಮೊದಲ ಹತ್ತು ಕ್ರೇನ್‌ಗಳನ್ನು ತೂಗಿ ಹಾಕಿದನು. ಚಿನ್ನದ ಕ್ರೇನ್ ಮೇಜಿನ ಮೇಲೆ ಅದರ ಗೌರವ ಸ್ಥಾನ ಆಕ್ರಮಿಸಿಕೊಂಡಿತ್ತು!

ರಾತ್ರಿ ಊಟದ ನಂತರ ಶ್ರೀಮತಿ ಸಸಾಕಿ ಮಿತ್ಸು ಮತ್ತು ಈಜಿಯನ್ನು ಆಸ್ಪತ್ರೆಗೆ ಕರೆತಂದರು.ಕ್ರೇನ್ ಪಕ್ಷಿಗಳನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾದರು. ಅವರು ಶ್ರೀಮತಿ ಸಸಾಕಿಗೆ ಪ್ರಸಿದ್ಧ ಹಳೆಯ ಕವಿತೆಯನ್ನು ನೆನಪಿಸಿಕೊಂಡರು:

Out of colored paper, cranes
come flying into
Our house

(ಕೊಕ್ಕರೆ ಕಾಗದ ಕೊಕ್ಕರೆ
ಕೆಂಪು, ಬಿಳಿ ಹಳದಿ
ಹಾರುತ ಬಂದಿಳಿಯಿತು
ನಮ್ಮ ಮನೆಯಂಗಳದಿ.)

ಮಿಟ್ಸು ಮತ್ತು ಈಜಿಯರಿಗೆ ಚಿನ್ನದ ಕ್ರೇನ್ ಬಹಳ ಇಷ್ಟವಾಯಿತು. ಆದರೆ ಶ್ರೀಮತಿ ಸಸಾಕಿ ಗುಲಾಬಿ ಬಣ್ಣದ ಛತ್ರಿಯಿಂದ ಅಲಂಕೃತವಾದ ಹಸಿರು ಕಾಗದದಿಂದ ಮಾಡಿದ ಅತ್ಯಂತ ಚಿಕ್ಕ ಕ್ರೇನನ್ನು ಇಷ್ಟಪಟ್ಟರು. 'ಇದು ನನ್ನ ಆಯ್ಕೆ,' ಅವರು ಹೇಳಿದರು, "ಏಕೆಂದರೆ ಚಿಕ್ಕದನ್ನು ಮಾಡುವುದು ಅತ್ಯಂತ ಕಷ್ಟ."

ಭೇಟಿಯ ಸಮಯದ ನಂತರ, ಆಸ್ಪತ್ರೆಯ ಕೋಣೆಯಲ್ಲಿ ಒಂಟಿತನವಿತ್ತು. ಸಡಾಕೊ ತನ್ನ ಧೈರ್ಯವನ್ನು ಉಳಿಸಿಕೊಳ್ಳಲು ಹೆಚ್ಚಿನ ಕ್ರೇನ್‌ಗಳನ್ನು ಮಡಚಿದಳು.

ಹನ್ನೊಂದು...ನಾನು ಗುಣಮುಖಳಾಗ ಬಯಸುತ್ತೇನೆ.

ಹನ್ನೆರಡು...ನಾನು ಗುಣಮುಖಳಾಗ ಬಯಸುತ್ತೇನೆ.

6. ಕೆಂಜಿ

ಸಡಕೋಳ ಅದೃಷ್ಟದ ಕ್ರೇನ್‌ಗಳನ್ನು ರಚಿಸಲು ಎಲ್ಲರೂ ಕಾಗದವನ್ನು ಉಳಿಸಿಲು ಪ್ರಾರಂಭಿಸಿದರು. ಚಿಜುಕೋ ಬ್ಯಾಂಬೂ ಕ್ಲಾಸ್ ನಿಂದ ಬಣ್ಣದ ಕಾಗದವನ್ನು ತಂದಳು. ತಂದೆ ತಮ್ಮ ಅಂಗಡಿಯಿಂದ ಪ್ರತಿಯೊಂದು ತುಣುಕನ್ನು ಉಳಿಸಿದರು. ನರ್ಸ್ ಯಸುನಾಗ ಕೂಡ ಸಡಕೋಗೆ ಔಷಧಿಗಳ ಪ್ಯಾಕೇಜುಗಳ ಕವರ್‌ಗಳನ್ನು ನೀಡಿದರು. ಮತ್ತು ಮಸಾಹಿರೋ ಭರವಸೆ ನೀಡಿದಂತೆ ಪ್ರತಿಯೊಂದು ಪಕ್ಷಿಯನ್ನು ತೂಗು ಹಾಕಿದನು. ಕೆಲವೊಮ್ಮೆ ಅವನು ಒಂದೇ ದಾರದಲ್ಲಿ ಹಲವು ಕ್ರೇನ್‌ಗಳನ್ನು ಕಟ್ಟಿದನು ಮತ್ತು ದೊಡ್ಡ ಕ್ರೇನ್‌ಗಳು ಒಂಟಿಯಾಗಿ ಹಾರುತ್ತಿದ್ದವು.

ಮುಂದಿನ ಕೆಲವು ತಿಂಗಳುಗಳಲ್ಲಿ ಸಡಾಕೊ ಬಹುತೇಕ ಸುಧಾರಿಸಿಕೊಂಡಿದ್ದ ಸಂದರ್ಭಗಳು ಇದ್ದವು. ಆದಾಗ್ಯೂ, ಡಾ. ನುಮಾಟಾ ಆಸ್ಪತ್ರೆಯಲ್ಲಿಯೇ ಇರುವುದು ಉತ್ತಮ ಎಂದು ಹೇಳಿದರು. ಈಗ ಸಡಾಕೊಗೆ ತನಗೆ ಲ್ಯುಕೇಮಿಯಾ ಇದೆ ಎಂದು ಅರಿವಾಯಿತು, ಆದರೆ ಕೆಲವು ರೋಗಿಗಳು ಆ ಕಾಯಿಲೆಯಿಂದ ಚೇತರಿಸಿಕೊಂಡಿದ್ದಾರೆಂದು ಅವಳಿಗೆ ತಿಳಿದಿತ್ತು. ಅವಳು ಕೂಡ ತಾನು ಗುಣಮುಖಳಾಗುತ್ತೇನೆ ಎಂದು ಆಶಿಸುವುದನ್ನು ಎಂದಿಗೂ ನಿಲ್ಲಿಸಲಿಲ್ಲ.

ದಿನಕಳೆದಂತೆ ಸಡಾಕೊ ಕಾರ್ಯನಿರತಳಾಗಿತೊಡಗಿದಳು. ಅವಳು ತನ್ನ ಗೃಹಪಾಠವನ್ನು ಮುಗಿಸುತ್ತಿದ್ದಳು, ಸ್ನೇಹಿತರಿಗೆ ಮತ್ತು ಪೆನ್ ಪಾಲ್ ರಿಗೆ ಪತ್ರಗಳನ್ನು ಬರೆದಳು ಆಟಗಳು, ಒಗಟುಗಳು ಮತ್ತು ಹಾಡು ಹಾಡುವುದರೊಂದಿಗೆ ತನ್ನ ಭೇಟಿ ಮಾಡುವವರೊಂದಿಗೆ ಖುಷಿಪಟ್ಟಳು. ಸಂಜೆ ಅವಳು ಯಾವಾಗಲೂ ಕಾಗದದ ಕ್ರೇನ್‌ಗಳನ್ನು ತಯಾರಿಸುತ್ತಿದ್ದಳು. ಅವಳ ಹಿಂಡು ಮುನ್ನೂರಕ್ಕೂ ಹೆಚ್ಚು ಬೆಳೆದಿತ್ತು. ಈಗ ಕ್ರೇನ್‌ಗಳು ಸಂಪೂರ್ಣವಾಗಿ ಮಡಚಲ್ಪಟ್ಟಿದ್ದವು. ಅವಳ ಬೆರಳುಗಳು ತರಬೇತುಗೊಂಡಿದ್ದವು ಮತ್ತು ಯಾವುದೇ ತಪ್ಪುಗಳಿಲ್ಲದೆ ತ್ವರಿತವಾಗಿ ಕೆಲಸ ಮಾಡುತ್ತಿದ್ದವು.

ಕ್ರಮೇಣ ಪರಮಾಣು ಬಾಂಬ್ ಕಾಯಿಲೆ ಸಡಕೋಳ ಶಕ್ತಿಯನ್ನು ಕಸಿದುಕೊಂಳ್ಳತೊಡಗಿತು. ಅವಳು ನೋವಿನ ಒಗ್ಗಿಕೊಳ್ಳತೊಡಗಿದಳು. ಕೆಲವೊಮ್ಮೆ ತೀವ್ರ ತಲೆನೋವು ಅವಳ ಓದು ಮತ್ತು ಬರಹಗಳನ್ನು ನಿಲ್ಲಿಸಿತು. ಇತರ ಸಮಯಗಳಲ್ಲಿ ಅವಳ ಮೂಳೆಗಳು ಬೆಂಕಿಯಲ್ಲಿರುವಂತೆ ತೋರುತ್ತಿತ್ತು. ಹೆಚ್ಚು ತಲೆತಿರುಗುವಿಕೆ ಸಡಕೋಳನ್ನು ಗಾಢ ಕತ್ತಲೆಗೆ ತಳ್ಳಿದವು. ಆಗಾಗ್ಗೆ, ಅವಳು ಕಿಟಕಿಯ ಬಳಿ ಕುಳಿತು ಅಂಗಳದಲ್ಲಿರುವ ಮೇಪಲ್ ಮರವನ್ನು ಆಸೆಯಿಂದ ನೋಡುವುದನ್ನು ಬಿಟ್ಟು ಬೇರೇನನ್ನೂ ಮಾಡಲು ತುಂಬಾ ದುರ್ಬಲಳಾಗಿದ್ದಳು. ಅವಳು ಚಿನ್ನದ ಕ್ರೇನ್ ಅನ್ನು ತನ್ನ ಮಡಿಲಲ್ಲಿ ಹಿಡಿದುಕೊಂಡು ಗಂಟೆಗಟ್ಟಲೆ ಅಲ್ಲಿಯೇ ಇರುತ್ತಿದ್ದಳು.

ಒಂದು ದಿನ ಸಡಾಕೊ ತುಂಬಾ ದಣಿದಿದ್ದಳು, ನರ್ಸ್ ಯಸುನಾಗ ಸ್ವಲ್ಪ ಬಿಸಿಲಿಗಾಗಿ ಅವಳನ್ನು ವರಾಂಡಾಗೆ ವ್ಹೀಲ್ ಚೇರ್ ನ ಮೇಲೆ ಕರೆದುಕೊಂಡು ಹೋದಾಗ, ಅಲ್ಲಿ ಸಡಾಕೊ ಮೊದಲ ಬಾರಿಗೆ ಕೆಂಜಿಯನ್ನು ನೋಡಿದಳು. ಅವನಿಗೆ ಒಂಬತ್ತು ವರ್ಷ ಮತ್ತು ಅವನ ವಯಸ್ಸಿಗೆ ಚಿಕ್ಕವನು. ಸಡಾಕೊ ಅವನ ತೆಳ್ಳಗಿನ ಮುಖ ಮತ್ತು ಹೊಳೆಯುವ ಕಪ್ಪು ಕಣ್ಣುಗಳನ್ನು ದಿಟ್ಟಿಸಿ ನೋಡಿದಳು.

"ನಮಸ್ಕಾರ!" ಅವಳು ಹೇಳಿದಳು. "ನಾನು ಸಡಾಕೊ."

ಕೆಂಜಿ ಮೆಲುವಾದ, ಮೃದುವಾದ ಧ್ವನಿಯಲ್ಲಿ ಉತ್ತರಿಸಿದ. ಶೀಘ್ರದಲ್ಲೇ ಇಬ್ಬರೂ ಎಷ್ಟೋ ಕಾಲದ ಹಳೆಯ ಸ್ನೇಹಿತರಂತೆ ಮಾತನಾಡಲು ಪ್ರಾರಂಭಿಸಿದರು, ಕೆಂಜಿ ಬಹಳ ಸಮಯದಿಂದ ಆಸ್ಪತ್ರೆಯಲ್ಲಿದ್ದ, ಆದರೆ ಅವನನ್ನು ಭೇಟಿ ಮಾಡುವವರು ಕಡಿಮೆ. ಅವರ ಹೆತ್ತವರು ನಿಧನರಾದರು ಮತ್ತು ಅವನು ಹತ್ತಿರದ ಪಟ್ಟಣದಲ್ಲಿ ತಮ್ಮ ಚಿಕ್ಕಮ್ಮನೊಂದಿಗೆ ವಾಸಿಸುತ್ತಿದ್ದ.

"ಅವಳು ತುಂಬಾ ವಯಸ್ಸಾದವಳು, ವಾರಕ್ಕೊಮ್ಮೆ ಮಾತ್ರ ನನ್ನನ್ನು ನೋಡಲು ಬರುತ್ತಾಳೆ," ಎಂದು ಕೆಂಜಿ ಹೇಳಿದ. "ನಾನು ಹೆಚ್ಚಿನ ಸಮಯ ಓದುತ್ತೇನೆ."

ಕೆಂಜಿಯ ಮುಖದಲ್ಲಿನ ದುಃಖವನ್ನು ನೋಡಿ ಸಡಾಕೊ ತಿರುಗಿಕೊಂಡಳು.

"ಅದ್ಯಾವುದೂ ನನಗೆ ಮುಖ್ಯವಲ್ಲ," ಅವನು ದಣಿದ ನಿಟ್ಟುಸಿರಿನೊಂದಿಗೆ ಮುಂದುವರೆದು, "ಏಕೆಂದರೆ ನಾನು ಶೀಘ್ರದಲ್ಲೇ ಸಾಯುತ್ತೇನೆ. ಬಾಂಬ್‌ನಿಂದ ನನಗೆ ಲ್ಯುಕೇಮಿಯಾ ಇದೆ."

"ಆದರೆ ನಿನಗೆ ಲ್ಯುಕೇಮಿಯಾ ಬರಲು ಸಾಧ್ಯವಿಲ್ಲ," ಸಡಾಕೊ ತಟಕ್ಕನೆ ಹೇಳಿದಳು. "ಆಗ ನೀನು ಹುಟ್ಟಿಯೇ ಇರಲಿಲ್ಲ."

"ಅದು ಮುಖ್ಯವಲ್ಲ," ಕೆಂಜಿ ಹೇಳಿದ. "ವಿಷವು ನನ್ನ ತಾಯಿಯ ದೇಹದಲ್ಲಿತ್ತು ಮತ್ತು ನಾನು ಅದನ್ನು ಅವರಿಂದ ಪಡೆದುಕೊಂಡೆ."

ಸಡಾಕೊ ಅವನನ್ನು ಸಮಾಧಾನಪಡಿಸಲು ತುಂಬಾ ಬಯಸಿದ್ದಳು, ಆದರೆ ಏನು ಹೇಳಬೇಕೆಂದು ಅವಳಿಗೆ ತಿಳಿದಿರಲಿಲ್ಲ. ಆಗ ಅವಳಿಗೆ ಕ್ರೇನ್‌ಗಳು ನೆನಪಾದವು. "ನನ್ನಂತೆ ನೀನೂ ಸಹ ಪೇಪರ್ ಕ್ರೇನ್‌ಗಳನ್ನು ಮಾಡಬಹುದು," ಅವಳು ಹೇಳಿದಳು, "ಇದರಿಂದ ಪವಾಡ ಸಂಭವಿಸಬಹುದು."

"ನನಗೆ ಕ್ರೇನ್‌ಗಳ ಬಗ್ಗೆ ತಿಳಿದಿದೆ," ಕೆಂಜಿ ಸದ್ದಿಲ್ಲದೆ ಉತ್ತರಿಸಿದ, "ಆದರೆ ಈಗಾಗಲೇ ತುಂಬಾ ತಡವಾಗಿದೆ. ದೇವರುಗಳು ಸಹ ಈಗ ನನಗೆ ಸಹಾಯ ಮಾಡಲು ಸಾಧ್ಯವಿಲ್ಲ."

ಅಷ್ಟರಲ್ಲಿ ನರ್ಸ್ ಯಸುನಾಗ ವರಾಂಡಾಗೆ ಬಂದಳು. "ಕೆಂಜಿ," ಅವಳು ಕಠೋರವಾಗಿ ಹೇಳಿದಳು, "ನಿನಗೆ ಇಂಥ ವಿಷಯಗಳು ಹೇಗೆ ಗೊತ್ತು?"

ಅವನು ಅವಳನ್ನು ತೀಕ್ಷ್ಣವಾಗಿ ನೋಡಿದನು. "ನನಗೆ ಗೊತ್ತು," ಅವನು ಹೇಳಿದನು. "ಇದಲ್ಲದೆ, ನನ್ನ ರಕ್ತದ ಎಣಿಕೆಯನ್ನು ನಾನು ಚಾರ್ಟ್‌ನಲ್ಲಿ ಓದಬಲ್ಲೆ. ಪ್ರತಿದಿನ ಅದು ಹದಗೆಡುತ್ತಿದೆ."

ನರ್ಸ್ ಗೊಂದಲಕ್ಕೊಳಗಾದಳು,

"ಏನು ಮಾತುಗಾರ!" ಅವಳು ಹೇಳಿದಳು. "ನೀನೇ ಸುಸ್ತಾಗುತ್ತಿದ್ದೀಯ." ಮತ್ತು ಅವಳು ಕೆಂಜಿಯನ್ನು ಒಳಗೆ ಕರೆದುಕೊಂಡು ಹೋದಳು.

ತನ್ನ ಕೋಣೆಗೆ ಹಿಂತಿರುಗಿದ ಸಡಕೋ ಚಿಂತೆಗೊಳಗಾದಳು. ಅವಳು ಅನಾರೋಗ್ಯದಿಂದ ಬಳಲುತ್ತಿದ್ದು ಮತ್ತು ಕುಟುಂಬವಿಲ್ಲದೆ ಇದ್ದರೆ ಹೇಗಿರಬಹುದೆಂದು ಊಹಿಸಲು ಪ್ರಯತ್ನಿಸಿದಳು. ಕೆಂಜಿ ನಿಜಕ್ಕೂ ಧೈರ್ಯಶಾಲಿಯಾಗಿದ್ದ. ಅವಳು ತನ್ನ ಅತ್ಯಂತ ಸುಂದರವಾದ ಕಾಗದದಿಂದ ದೊಡ್ಡ ಕ್ರೇನ್ ಅನ್ನು ಮಾಡಿ ಅವನ ಕೋಣೆಗೆ ಕಳುಹಿಸಿದಳು. ಬಹುಶಃ ಅದು ಅವನಿಗೆ ಅದೃಷ್ಟವನ್ನು ತರಬಹುದು. ನಂತರ ಅವಳು ತನ್ನ ಹಿಂಡಿಗೆ ಹೆಚ್ಚಿನ ಕ್ರೇನ್‌ಗಳನ್ನು ಮಡಿಸಚಲನುವಾದಳು.

ಮುನ್ನೂರ ತೊಂಬತ್ತೆಂಟು.

ಮುನ್ನೂರ ತೊಂಬತ್ತೊಂಬತ್ತು ...

ಒಂದು ದಿನ ಕೆಂಜಿ ವರಾಂಡಾದಲ್ಲಿ ಕಾಣಿಸಲಿಲ್ಲ. ಆ ರಾತ್ರಿ ತಡವಾಗಿ ಸಡಕೋಗೆ ಹಾಲ್‌ನಲ್ಲಿ ಹಾಸಿಗೆ ಸುತ್ತುತ್ತಿರುವ ಸದ್ದು ಕೇಳಿಸಿತು. ನರ್ಸ್ ಯಸುನಾಗ ಒಳಗೆ ಬಂದು ಕೆಂಜಿ ಸತ್ತಿದ್ದಾನೆಂದು ಹೇಳಿದಳು. ಸಡಕೋ ಗೋಡೆಯ ಕಡೆಗೆ ತಿರುಗಿ ಕಣ್ಣೀರು ಸುರಿಸಿದಳು.

ಸ್ವಲ್ಪ ಸಮಯದ ನಂತರ ಅವಳು ತನ್ನ ಭುಜದ ಮೇಲೆ ನರ್ಸ್‌ನ ಸೌಮ್ಯವಾದ ಸ್ಪರ್ಶ ಅನುಭವಿಸಿದಳು. "ಕಿಟಕಿಯ ಬಳಿ ಕುಳಿತು ಮಾತನಾಡೋಣ," ನರ್ಸ್ ಯಸುನಾಗ ಹೇಳಿದಳು.

ಕೊನೆಗೂ ಸಡಾಕೊ ಅಳುವುದನ್ನು ನಿಲ್ಲಿಸಿ ಚಂದ್ರನಿಂದ ಪ್ರಕಾಶಿಸಲ್ಪಟ್ಟ ಆಕಾಶದತ್ತ ನೋಡಿದಳು. "ಕೆಂಜಿ ಅಲ್ಲಿ ನಕ್ಷತ್ರ ದ್ವೀಪದಲ್ಲಿದ್ದಾನೆಂದು ನೀನು ಭಾವಿಸುತ್ತೀಯಾ?"

"ಅವನು ಎಲ್ಲೇ ಇದ್ದರೂ, ಅವನು ಈಗ ಸಂತೋಷವಾಗಿರುತ್ತಾನೆ ಎಂದು ನನಗೆ ಖಾತ್ರಿಯಿದೆ" ಎಂದು ನರ್ಸ್ ಹೇಳಿದರು. "ಅವನು ಆ ದಣಿದ, ರೋಗಗ್ರಸ್ತ ದೇಹವನ್ನು ತ್ಯಜಿಸಿದ್ದಾನೆ ಮತ್ತು ಅವನ ಆತ್ಮವು ಮುಕ್ತವಾಗಿದೆ."

ಸಡಾಕೊ ಗಾಳಿಯಲ್ಲಿ ಮೇಪಲ್ ಮರದ ಎಲೆಗಳು ಸದ್ದು ಮಾಡುವುದನ್ನು ಕೇಳುತ್ತಾ ಮೌನವಾಗಿದ್ದಳು. ನಂತರ ಅವಳು, "ನಾನು ಮುಂದೆ ಸಾಯುತ್ತೇನೆ, ಅಲ್ಲವೇ?" ಎಂದಳು.

"ಖಂಡಿತ ಇಲ್ಲ!" ನರ್ಸ್ ಯಸುನಾಗ ತಲೆ ಅಲ್ಲಾಡಿಸುತ್ತಾ ಉತ್ತರಿಸಿದಳು. ಅವಳು ಸಡಕೋಳ ಹಾಸಿಗೆಯ ಮೇಲೆ ಕೆಲವು ಬಣ್ಣದ ಕಾಗದವನ್ನು ಹರಡಿದಳು. "ನೀನು ಮಲಗುವ ಮುನ್ನ ಇನ್ನೊಂದು ಪೇಪರ್ ಕ್ರೇನ್ ಅನ್ನು ಮಡಚುವುದನ್ನು ನಾನು ನೋಡಬೇಕು ಬಾ. ಸಾವಿರ ಪಕ್ಷಿಗಳನ್ನು ಮುಗಿಸಿದ ನಂತರ, ನೀನು ವೃದ್ದೆಯಾಗಿ ಬದುಕುವೆ."

ಸಡಾಕೊ ಅದನ್ನು ನಂಬಿಸಲು ತುಂಬಾ ಪ್ರಯತ್ನಿಸಿದಳು. ಅವಳು ಎಚ್ಚರಿಕೆಯಿಂದ ಕ್ರೇನ್‌ಗಳನ್ನು ಮಡಿಸಿ ಅದೇ ಆಶಯವನ್ನು ಮಾಡಿದಳು.

ನಾಲ್ಕುನೂರ ಅರವತ್ತಮೂರು.

ನಾಲ್ಕು ನೂರ ಅರವತ್ತನಾಲ್ಕು...

7.
ನೂರಾರು ಶುಭಾಶಯಗಳು

ಜೂನ್ ತಿಂಗಳು ಅಂತ್ಯವಿಲ್ಲದ ಮತ್ತು ದೀರ್ಘಮಳೆಯೊಂದಿಗೆ ಬಂದಿತು. ದಿನದಿಂದ ದಿನಕ್ಕೆ ಆಕಾಶ ಬೂದು ಬಣ್ಣದ್ದಾಗಿತ್ತು, ಕಿಟಕಿಗಳ ಮೇಲೆ ಮಳೆನೀರು ಸುರಿಯುತ್ತಿತ್ತು. ಮೇಪಲ್ ಮರದ ಎಲೆಗಳಿಂದ ಮಳೆ ನಿರಂತರವಾಗಿ ತೊಟ್ಟಿಕ್ಕುತ್ತಿತ್ತು. ಮಳೆಯಿಂದ ಕೋಣೆಯಲ್ಲಿ ಎಲ್ಲವೂ ಮುಗ್ಗಲು ವಾಸನೆ ಬರುತ್ತಿತ್ತು. ಹಾಸಿಗೆಗಳು ಸಹ ಜಿನುಗುತ್ತಿದ್ದವು.

ಸಡಾಕೊ ಕೃಶಳಾದಳು, ಅವಳಿಗೆ ನಿರಾಸಕ್ತಿ ಆವರಿಸಿತು. ಅವಳ ಹೆತ್ತವರು ಮತ್ತು ಮಸಾಹಿರೊಗೆ ಮಾತ್ರ ಅವಳನ್ನು ಭೇಟಿ ಮಾಡಲು ಅವಕಾಶ ನೀಡಲಾಯಿತು. ಬ್ಯಾಂಬೈ ಕ್ಲಾಸ್‌ನವರು ಅವಳನ್ನು ಹುರಿದುಂಬಿಸಲು ಕೊಕೇಶಿ ಗೊಂಬೆಯನ್ನು ಕಳುಹಿಸಿದರು. ಸಡಾಕೊಗೆ ಮರದ ಗೊಂಬೆಯ ವಿಷಣ್ಣನಗು ಮತ್ತು ಅದರ ಕಿಮೋನೊದ ಮೇಲೆ ಚಿತ್ರಿಸಿದ ಕೆಂಪು ಗುಲಾಬಿಗಳು ಇಷ್ಟವಾಯಿತು. ಆ ಗೊಂಬೆ ಸಡಾಕೊಳ ಹಾಸಿಗೆಯ ಪಕ್ಕದ ಮೇಜಿನ ಮೇಲಿದ್ದ ಚಿನ್ನದ ಕ್ರೇನ್‌ನ ಪಕ್ಕದಲ್ಲಿ ನಿಂತಿತ್ತು,

ಸಡಾಕೊ ಹೊಟ್ಟೆ ತುಂಬಾ ತಿನುತ್ತಿಲ್ಲವೆಂದು ಎಂದು ಶ್ರೀಮತಿ ಸಸಕಿ ಚಿಂತಿತಳಾಗಿದ್ದಳು. ಒಂದು ಸಂಜೆ ಅವಳು ಫ್ಯೂರೋಶಿಕಿ ಬಂಡಲ್‌ನಲ್ಲಿ ಸುತ್ತಿದ ಒಂದು ಅಚ್ಚರಿಯನ್ನು ತಂದಳು. ಅದರಲ್ಲಿ ಸಡಾಕೊಳ ಎಲ್ಲಾ ನೆಚ್ಚಿನ ಆಹಾರಗಳಾದ ಎಗ್ ರೋಲ್, ಚಿಕನ್ ಮತ್ತು ರೈಸ್, ಉಪ್ಪಿನಕಾಯಿ, ಪ್ಲಮ್ ಮತ್ತು ಬೀನ್ ಕೇಕ್‌ಗಳು ಇದ್ದವು. ಸಡಾಕೊ ದಿಂಬುಗಳ ಮೇಲೆ ಅವೆಲ್ಲವನ್ನೂ ಜೋಡಿಸಿಟ್ಟುಕೊಂಡು ತಿನ್ನಲು ಪ್ರಯತ್ನಿಸಿದಳು. ಆದರೆ ಅದು ಪ್ರಯೋಜನವಾಗಲಿಲ್ಲ. ಅವಳ ಊದಿಕೊಂಡ ಒಸಡುಗಳು ತುಂಬಾ ನೋಯುತ್ತಿದ್ದವು, ಅವಳಿಗೆ ಅಗಿಯಲು ಸಾಧ್ಯವಾಗಲಿಲ್ಲ. ಕೊನೆಗೆ, ಸಡಾಕೊ ತನ್ನಿಷ್ಟದ ಎಲ್ಲಾ ಖಾದ್ಯಗಳನ್ನೂ ದೂರ ತಳ್ಳಿದಳು. ಅವಳ ತಾಯಿಯ ಕಣ್ಣುಗಳು ಕಂಬನಿಯಲ್ಲಿ ತೋಯ್ದವು..

“ನಾನೆಷ್ಟು ಪಾಪಿ!" ಸಡಾಕೊ ಸಿಡಿದೆದ್ದಳು. ತನ್ನ ತಾಯಿಗೆ ದುಃಖ ನೀಡಿದ್ದಕ್ಕಾಗಿ ಅವಳು ತನ್ನ ಮೇಲೆಯೇ ಕೋಪಗೊಂಡಿದ್ದಳು. ಸಸಕಿ ಕುಟುಂಬಕ್ಕೆ ದುಬಾರಿ ಆಹಾರಕ್ಕಾಗಿ ಹೆಚ್ಚುವರಿ ಹಣ ಖರ್ಚು ಮಾಡಲು ತಯಾರಿರಲಿಲ್ಲ ಎಂದು ಅವಳು ತಿಳಿದಿದ್ದಳು. ಸಡಾಕೊಳ ಕಣ್ಣುಗಳಲ್ಲಿ ನೀರು ಬಂತು.

"ಎಲ್ಲವೂ ಸರಿ," ಶ್ರೀಮತಿ ಸಸಾಕಿ ಸಮಾಧಾನದಿಂದ ಹೇಳಿದಳು. ಅವಳು ಸಡಾಕೊಳನ್ನು ತನ್ನ ತೋಳುಗಳಲ್ಲಿ ಹೊತ್ತುಕೊಂಡಳು. "ನೀನು ಬೇಗ ಗುಣಮುಖಳಾಗುತ್ತೀಯ. ಬಹುಶಃ ಸೂರ್ಯ ಮತ್ತೆ ಬಂದಾಗ."

ಸಡಾಕೊ ತನ್ನ ತಾಯಿಯ ಮೇಲೆ ಒರಗಿ ಕುಳಿತು ಅವಳು ಓದುತ್ತಿದ್ದ ಕವಿತೆಗಳನ್ನು ಕೇಳುತ್ತಿದ್ದಳು. ಮಸಾಹಿರೊ ಬಂದಾಗ, ಸಡಾಕೊ ಶಾಂತ ಮತ್ತು ಸಂತೋಷದಿಂದ ಇದ್ದಳು. ಅವನು ಅವಳಿಗೆ ಶಾಲೆಯಿಂದ ಬಂದ ಸುದ್ದಿಗಳನ್ನು ಹೇಳಿದನು ಮತ್ತು ವಿಶೇಷ ಭೋಜನವನ್ನು ಸೇವಿಸಿದನು.

ಮಸಾಹಿರೋ ಹೊರಡುವ ಮೊದಲು, "ಓಹ್, ನಾನು ಮರೆತೇ ಬಿಟ್ಟೆ! ಈಜಿ ನಿನಗೆ ಒಂದು ಉಡುಗೊರೆಯನ್ನು ಕಳುಹಿಸಿದ್ದಾನೆ" ಎಂದು ಹೇಳಿದನು. ಅವನು ತನ್ನ ಜೇಬಿನಿಂದ ಸುಕ್ಕುಗಟ್ಟಿದ ಬೆಳ್ಳಿ ಕಾಗದದ ತುಂಡನ್ನು ಹೊರತೆಗೆದನು. "ಇಗೋ," ಅವನು ಅದನ್ನು ತನ್ನ ಸಹೋದರಿಗೆ ಕೊಟಡುತ್ತಾ "ಈಜಿ ಇದು ಮತ್ತೊಂದು ಕ್ರೇನ್‌ಗಾಗಿ ಎಂದು ಹೇಳಿದ್ದಾನೆ." ಎಂದನು

ಸಡಾಕೊ ಕಾಗದವನ್ನು ಮೂಸಿ ನೋಡಿದಳು. "ಉಮ್ಮ್ ! ಇದು ಕ್ಯಾಂಡಿಯಂತೆ ವಾಸನೆ ಬರುತ್ತದೆ," ಅವಳು ಹೇಳಿದಳು. "ದೇವರುಗಳಿಗೆ ಚಾಕೊಲೇಟ್ ಇಷ್ಟವಾಗುತ್ತದೆ ಎಂದು ನಾನು ಭಾವಿಸುತ್ತೇನೆ."

ಮೂವರು ನಕ್ಕರು. ಇಷ್ಟು ದಿನಗಳಲ್ಲಿ ಸಡಾಕೊ ಮೊದಲ ಬಾರಿಗೆ ನಕ್ಕಿದ್ದಳು. ಅದು ಒಳ್ಳೆಯ ಸೂಚನೆಯಾಗಿರಬಹುದು. ಬಹುಶಃ ಚಿನ್ನದ ಕ್ರೇನ್‌ನ ಮ್ಯಾಜಿಕ್ ಕೆಲಸ ಮಾಡಲು ಪ್ರಾರಂಭಿಸಿರಬಹುದು. ಅವಳು ಕಾಗದವನ್ನು ನಯಗೊಳಿಸಿ ಹಕ್ಕಿಯನ್ನು ಮಡಚಿದಳು.

ಐದುನೂರ ನಲವತ್ತೊಂದು ...

ಆದರೆ ಅವಳು ಹೆಚ್ಚು ಕ್ರೇನ್‌ಗಳನ್ನು ಮಡಚಲು ತುಂಬಾ ದಣಿದಿದ್ದಳು. ಸಡಾಕೊ ಹಾಸಿಗೆಯ ಮೇಲೆ ಮೈ ಚಾಚಿ ಕಣ್ಣು ಮುಚ್ಚಿದಳು. ಶ್ರೀಮತಿ ಸಸಕಿ ಕೋಣೆಯಿಂದ ತುದಿಗಾಲಿನಲ್ಲಿ ಹೊರಬಂದಾಗ, ಸಡಾಕೊ ಚಿಕ್ಕವಳಿದ್ದಾಗ ಹೇಳುತ್ತಿದ್ದ ಕವಿತೆಯನ್ನು ಅವಳು ಪಿಸುಗುಟ್ಟಿದಳು:

"O flock of heavenly cranes

Cover my child with your wings"

["ನೀಡು ಮೃದು ಸ್ಪರ್ಶ ನನ್ನ ಕಂದಗೆ

ಇದೊಂದೇ ಪ್ರಾರ್ಥನೆ ಸ್ವರ್ಗ ಲೋಕದ ಹಕ್ಕಿಯ ಹಿಂಡಿಗೆ!"]

8.
ಕೊನೆಯ ದಿನಗಳು

ಜುಲೈ ಅಂತ್ಯದ ವೇಳೆಗೆ ವಾತಾವರಣ ಬೆಚ್ಚಗಿತ್ತು ಮತ್ತು ಬಿಸಿಲು ಇತ್ತು. ಸಡಾಕೊ ಚೇತರಿಸಿಕೊಳ್ಳುತ್ತಿರುವಂತೆ ತೋರುತ್ತಿತ್ತು. "ನನ್ನ ಸಾವಿರ ಕ್ರೇನ್‌ಗಳ ದಾರಿ ಅರ್ಧ ದಾಟಿದೆ." ಎಂದು ಅವಳು ಮಸಾಹಿರೊಗೆ ಹೇಳಿದಳು, "ಹಾಗಾದರೆ ಏನೋ ಒಳ್ಳೆಯದು ಸಂಭವಿಸಲಿದೆ."

ಮತ್ತು ಅದು ಕೂಡಾ ಸಂಭವಿಸಿತು. ಅವಳ ಹಸಿವು ಮರುಕಳಿಸಿ ಮತ್ತು ನೋವಿನ ತೀವ್ರತೆ ಕಡಿಮೆಯಾಯಿತು. ಡಾ. ನುಮಾಟಾ ಅವಳ ಪ್ರಗತಿಯಿಂದ ಸಂತೋಷಪಟ್ಟರು ಮತ್ತು ಸಡಕೋಗೆ ಮನೆಗೆ ಹೋಗಬಹುದು ಎಂದು ಹೇಳಿದರು. ಆ ರಾತ್ರಿ ಸಡಕೋ ತುಂಬಾ ಉತ್ಸುಕಳಾಗಿದ್ದಳು, ಅವಳಿಗೆ ನಿದ್ರೆ ಬರಲಿಲ್ಲ. ಮ್ಯಾಜಿಕ್ ಕೆಲಸ ಮಾಡುವಂತೆ ಮಾಡಲು ಅವಳು ಹೆಚ್ಚಿನ ಕ್ರೇನ್‌ಗಳನ್ನು ತಯಾರಿಸಿದಳು.

ಆರುನೂರ ಇಪ್ಪತ್ತೊಂದು...

ಆರುನೂರ ಇಪ್ಪತ್ತೆರಡು ...

ವರ್ಷದ ಅತಿದೊಡ್ಡ ರಜಾದಿನವಾದ ಓ ಬಾನ್‌ಗಾಗಿ ಕುಟುಂಬದೊಂದಿಗೆ ಮನೆಯಲ್ಲಿರುವುದು ಅದ್ಭುತವಾಗಿತ್ತು, ಭೂಮಿಯ ಮೇಲೆ ತಾವು ಪ್ರೀತಿಸಿದವರನ್ನು ಭೇಟಿ ಮಾಡಲು ಮರಳಿದ ಸತ್ತವರ ಆತ್ಮಗಳಿಗೆ ಬಾನ್ ಒಂದು ವಿಶೇಷ ಆಚರಣೆಯಾಗಿತ್ತು.

ಶ್ರೀಮತಿ ಸಸಾಕಿ ಮತ್ತು ಮಿತ್ಸು ಮನೆಯನ್ನು ಸ್ವಚ್ಛಗೊಳಿಸಿ, ಅದು ಹೊಳೆಯುವವರೆಗೂ ಗುಡಿಸಿದ್ದರು. ತಾಜಾ ಹೂವುಗಳು ಟೇಬಲ್ ಅನ್ನು ಬೆಳಗಿಸಿದವು. ಸಡಾಕೊಳ ಚಿನ್ನದ ಕ್ರೇನ್ ಮತ್ತು ಕೊಕೇಶಿ ಗೊಂಬೆ ಕೂಡ ಅಲ್ಲಿದ್ದವು. ರುಚಿಕರವಾದ ಹಬ್ಬದ ಆಹಾರದ ಪರಿಂಳದಿನಂ ಮನೆಯು ತುಂಬಿತ್ತು. ಆತ್ಮದ ಸಂದರ್ಶಕರಿಗಾಗಿ ಬಲಿಪೀಠದ ಕಪಾಟಿನಲ್ಲಿ ಬೀನ್ ಕೇಕ್ ಮತ್ತು ಅಕ್ಕಿ ಉಂಡೆಗಳ ಭಕ್ಷ್ಯಗಳನ್ನು ಇರಿಸಲಾಗಿತ್ತು.

ಆ ರಾತ್ರಿ ಸಡಕೋ ತನ್ನ ತಾಯಿ ಕತ್ತಲೆಯಲ್ಲಿ ಆತ್ಮಗಳು ದಾರಿ ಕಂಡುಕೊಳ್ಳಲು ಹೊರಗೆ ಲ್ಯಾಂಟರ್ನ್ ಹಾಕುವುದನ್ನು ನೋಡುತ್ತಿದ್ದಳು. ಅವಳು ಸಂತೋಷದ ನಿಟ್ಟುಸಿರು ಬಿಟ್ಟಳು ಬಹುಶಃ ಸಡಕೋ ಮನೆಗೆ ಮರಳಿದ್ದರಿಂದ!

ಹಲವಾರು ದಿನಗಳವರೆಗೆ ಸ್ನೇಹಿತರು ಮತ್ತು ಸಂಬಂಧಿಕರ ನಿರಂತರ ಪ್ರವಾಹವು ಸಸಾಕಿ ಕುಟುಂಬವನ್ನು ಭೇಟಿ ಮಾಡಲು ಬರುತ್ತಿತ್ತು.

ಒಂದು ವಾರದ ಅಂತ್ಯದ ವೇಳೆಗೆ ಸಡಾಕೊ ಪುನಃ ಕೃಶಳಾದಳು. ಅವಳು ಸುಮ್ಮನೆ ಕುಳಿತು ಇತರರನ್ನು ನೋಡುತ್ತಿದ್ದಳು.

"ಸಡಾಕೊ ಈಗ ಖಂಡಿತವಾಗಿಯೂ ಒಳ್ಳೆಯ ನಡವಳಿಕೆಯನ್ನು ಹೊಂದಿದ್ದಾಳೆ" ಎಂದು ಶ್ರೀ ಸಸಾಕಿ ಹೇಳಿದರು. "ತಮ್ಮ ಮೊಮ್ಮಗಳು ಬದಲಾವಣೆಯನ್ನು ನೋಡಿ ಒಬಾ ಚಾನ್ ಅವರ ಆತ್ಮವು ಸಂತೋಷಪಡಬೇಕು."

"ನೀವು ಹಾಗೆ ಹೇಗೆ ಹೇಳುತ್ತೀರಿ!" ಶ್ರೀಮತಿ ಸಸಾಕಿ ಅಳುತ್ತಾ, "ನಮ್ಮ ಹಳೆಯ ಲವಲವಿಕೆಯ ಸಡಾಕೊ ಹಿಂತಿರುಗಿ ಬರುವುದು ನನಗೆ ಇಷ್ಟ." ಅವಳು ಕಣ್ಣುಗಳನ್ನು ಒರೆಸಿಕೊಂಡು ಅಡುಗೆ ಮನೆಯೊಳಗೆ ಆತುರದಿಂದ ಹೋದಳು.

"ನಾನು ಎಲ್ಲರನ್ನೂ ದುಃಖಿಸುತ್ತಿದ್ದೇನೆ," ಎಂದು ಸಡಾಕೊ ಯೋಚಿಸಿದಳು. ಅವಳು ಇದ್ದಕ್ಕಿದ್ದಂತೆ ತನ್ನ ಹಳೆಯ ಸ್ವಭಾವಕ್ಕೆ ಬದಲಾಗಬೇಕೆಂದು ಬಯಸುತ್ತಿದ್ದಳು. ಆಗ ಅವಳ ತಾಯಿ ಎಷ್ಟು ಸಂತೋಷಪಡುತ್ತಿದ್ದಳು!

ಸಡಕೋಳ ಮನಸ್ಸಿನಲ್ಲಿ ಏನಿದೆ ಎಂದು ಅವನಿಗೆ ತಿಳಿದಿರುವಂತೆ, ಅವಳ ತಂದೆ ಒರಟಾಗಿ ಹೇಳಿದರು, "ಈಗ ಚಿಂತಿಸಬೇಡಿ. ರಾತ್ರಿ ಚೆನ್ನಾಗಿ ವಿಶ್ರಾಂತಿ ಪಡೆದ ನಂತರ ನೀವು ಚೆನ್ನಾಗಿರುತ್ತೀರಿ."

ಆದರೆ ಮರುದಿನ ಸಡಾಕೊ ಆಸ್ಪತ್ರೆಗೆ ಹಿಂತಿರುಗಬೇಕಾಯಿತು. ಮೊದಲ ಬಾರಿಗೆ ಅವಳು ಆಸ್ಪತ್ರೆಯ ಶಾಂತ ವಾತಾವರಣದಲ್ಲಿರುವುದಕ್ಕೆ ಸಂತೋಷಪಟ್ಟಳು. ಅವಳ ಹೆತ್ತವರು ಹಾಸಿಗೆಯ ಪಕ್ಕದಲ್ಲಿ ಬಹಳ ಹೊತ್ತು ಕುಳಿತಿದ್ದರು. ಆಗಾಗ ಸಡಾಕೊ ವಿಚಿತ್ರ ರೀತಿಯ ಅರ್ಧ ನಿದ್ರೆಗೆ ಜಾರಿದಳು,

"ನಾನು ಸತ್ತಾಗ," ಅವಳು ನಿದ್ರೆಯಲ್ಲಿ ಕೇಳಿದಳು, "ನನ್ನ ಆತ್ಮಕ್ಕಾಗಿ ನನ್ನ ನೆಚ್ಚಿನ ಬೀನ್ ಕೇಕ್‌ಗಳನ್ನು ಬಲಿಪೀಠದ ಮೇಲೆ ಇಡುತ್ತೀರಾ?"

ಶ್ರೀಮತಿ ಸಸಾಕಿಗೆ ಮಾತನಾಡಲು ಸಾಧ್ಯವಾಗಲಿಲ್ಲ. ಅವಳು ತನ್ನ ಮಗಳ ಕೈಯನ್ನು ಹಿಡಿದು ಬಿಗಿಯಾಗಿ ಹಿಡಿದಳು.

"ಹುಶ್!" ಶ್ರೀ ಸಸಾಕಿ ತಮಾಷೆಯ ಧ್ವನಿಯಲ್ಲಿ ಹೇಳಿದರು. "ಅದು ತುಂಬಾ ವರ್ಷಗಳ ಕಾಲ ಆಗುವುದಿಲ್ಲ. ಈಗ ಬಿಟ್ಟುಕೊಡಬೇಡ, ಸದwಕೋ ಚಾನ್. ನೀನು ಇನ್ನು ಕೆಲವು ನೂರು ಕ್ರೇನ್‌ಗಳನ್ನು ಮಾತ್ರ ಮಾಡಬೇಕಾಗಿದೆ."

ನರ್ಸ್ ಯಸುನಾಗ ಸಡಾಕೊಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುವ ಔಷಧಿಯನ್ನು ಕೊಟ್ಟಳು. ಅವಳು ಕಣ್ಣು ಮುಚ್ಚುವ ಮೊದಲೇ, ಸಡಾಕೊ ಚಿನ್ನದ ಕ್ರೇನ್ ಅನ್ನು ಮುಟ್ಟಲು ಕೈ ಚಾಚಿದಳು.

"ನಾನು ಗುಣಮುಖನಾಗುತ್ತೇನೆ," ಅವಳು ಕೊಕೇಶಿ ಗೊಂಬೆಗೆ ಮೆಲುದನಿಯಲ್ಲಿ ಹೇಳಿದಳು, "ಮತ್ತು ಒಂದು ದಿನ ನಾನು ಗಾಳಿಯಂತೆ ಓಡುತ್ತೇನೆ."

ಅಂದಿನಿಂದ ಡಾ. ನುಮಾಟಾ ಬಹುತೇಕ ಪ್ರತಿದಿನ ಸಡಕೋಗೆ ರಕ್ತ ವರ್ಗಾವಣೆ ಮಾಡುವುದೋ ಅಥವಾ ಚುಚ್ಚುಮದ್ದನ್ನು ನೀಡಿವಿದನ್ನೋ ಮಾಡುತ್ತಿದ್ದರು. "ಇದು ನೋವುಂಟುಮಾಡುತ್ತದೆ ಎಂದು ನನಗೆ ತಿಳಿದಿದೆ," ಅವರು ಹೇಳಿದರು, "ಆದರೆ ನಾವು ಪ್ರಯತ್ನಿಸುತ್ತಲೇ ಇರಬೇಕು,"

ಸಡಾಕೊ ತಲೆಯಾಡಿಸಿದಳು. ಚುಚ್ಚುಮದ್ದಗಳ ಬಗ್ಗೆ ಮತ್ತು ಬಹುತೇಕ ನಿರಂತರ ನೋವಿನ ಬಗ್ಗೆ ಅವಳು ಎಂದಿಗೂ ದೂರು ನೀಡಲಿಲ್ಲ. ಅವಳೊಳಗೆ ಒಂದು ದೊಡ್ಡ ನೋವು ಆಳವಾಗಿ ಬೆಳೆಯುತ್ತಿತ್ತು. ಅದು ಸಾಯುವ ಭಯ. ಅವಳು ರೋಗದ ಜೊತೆಗೆ ಅದರ ವಿರುದ್ಧವೂ ಹೋರಾಡಬೇಕಾಗಿತ್ತು. ಈ ನಿಟ್ಟಿನಲ್ಲಿ ಚಿನ್ನದ ಕ್ರೇನ್ ಅವಳಿಗೆ ಸಹಾಯ ಮಾಡಿತು; ಯಾವಾಗಲೂ ಭರವಸೆ ಇಡು ಎಂದು ಅದು ಸಡಾಕೊಗೆ ನೆನಪಿಸುತ್ತಿತು.

ಶ್ರೀಮತಿ ಸಸಾಕಿ ಆಸ್ಪತ್ರೆಯಲ್ಲಿ ಹೆಚ್ಚು ಹೆಚ್ಚು ಸಮಯ ಕಳೆದರು. ಪ್ರತಿದಿನ ಮಧ್ಯಾಹ್ನ ಸಡಾಕೊ ಹಾಲ್‌ನಲ್ಲಿ ತನ್ನ ಪ್ಲಾಸ್ಟಿಕ್ ಚಪ್ಪಲಿಗಳ ಪರಿಚಿತ ಪಟಾ ಪಟ್ಟ ಸದ್ದನ್ನು ಕೇಳುತ್ತಿದ್ದಳು. ಎಲ್ಲಾ ಅತಿಥಿಗಳು ಬಾಗಿಲಿಗೆ ಹಳದಿ ಚಪ್ಪಲಿಗಳನ್ನು ಹಾಕಬೇಕಾಗಿತ್ತು, ಆದರೆ ಶ್ರೀಮತಿ ಸಸಾಕಿಯ ಚಪ್ಪಲಿಗಳು ವಿಶೇಷವಾದ ಶಬ್ದವನ್ನು ಮಾಡುತ್ತಿತ್ತು. ತನ್ನ ತಾಯಿಯ ಮುಖವು ಚಿಂತೆಯಿಂದ ತುಂಬಿರುವುದನ್ನು ನೋಡಿ ಸಡಾಕೊಳ ಹೃದಯವಕ್ಕೆ ನೋವುಂಟಾಯಿತು.

ಕುಟುಂಬವು ಕೊನೆಯ ಭೇಟಿಗೆ ಬಂದಾಗ ಮೇಪಲ್ ಮರದ ಎಲೆಗಳು ಮುಪ್ಪಾಗಿ ಚಿನ್ನ ದ ಬಣ್ಣಕ್ಕೆ ತಿರುಗುತ್ತಿದ್ದವು. ಈಜಿ ಸಡಕೋಗೆ ಚಿನ್ನದ ಕಾಗದದಲ್ಲಿ ಸುತ್ತಿದ ಮತ್ತು ಕೆಂಪು ರಿಬ್ಬನ್‌ನಿಂದ ಕಟ್ಟಲಾದ ದೊಡ್ಡ ಪೆಟ್ಟಿಗೆಯನ್ನು ಕೊಟ್ಟಳು. ನಿಧಾನವಾಗಿ ಸಡಕೋ ಅದನ್ನು ತೆರೆದಳು. ಒಳಗೆ ಅವಳ ತಾಯಿ ಯಾವಾಗಲೂ ತನಗಾಗಿ ಬಯಸುತ್ತಿದ್ದ ಒಂದು ರೇಷ್ಮೆ ಕಿಮೋನೊ, ಮೇಲೆ ಚೆರ್ರಿ ಹೂವುಗಳನ್ನು ಹೊಂದಿರುವ ರೇಷ್ಮೆ ಕಿಮೋನೊ. ಸಡಕೋಗೆ ಕಣ್ಣೀರು ಸುರಿಯಿತು, ನೋಟ ಮಸುಕಾಗಿಸುತ್ತದೆ ಎಂದು ಭಾವಿಸಿದಳು.

"ನೀನು ಯಾಕೆ ಹಾಗೆ ಮಾಡಿದೆ?" ಅವಳು ಮೃದುವಾದ ಬಟ್ಟೆಯನ್ನು ಮುಟ್ಟುತ್ತಾ ಕೇಳಿದಳು. "ನಾನು ಅದನ್ನು ಎಂದಿಗೂ ಧರಿಸಲು ಸಾಧ್ಯವಾಗುವುದಿಲ್ಲ ಮತ್ತು ರೇಷ್ಮೆಗೆ ತುಂಬಾ ಹಣ ಖರ್ಚಾಗುತ್ತದೆ."

"ಸಡಕೋ ಚಾನ್ ," ಅವಳ ತಂದೆ ಮೃದುವಾಗಿ ಹೇಳಿದರು, "ನಿಮ್ಮ ತಾಯಿ ನಿನ್ನೆ ರಾತ್ರಿ ಇದನ್ನು ಹೊಲಿಯಲು ತಡರಾತ್ರಿ ಎಚ್ಚರವಾಗಿದ್ದರು. ಅವಳಿಗಾಗಿ ಇದನ್ನು ಒಮ್ಮೆ ಧರಿಸು"

ಸಡಾಕೊ ಬಹಳ ಪ್ರಯಾಸದಿಂದ ಹಾಸಿಗೆಯಿಂದ ಮೇಲೆದ್ದಳು. ಶ್ರೀಮತಿ ಸಸಾಕಿ ಅವಳಿಗೆ ಕಿಮೋನೊ ಧರಿಸಲು ಮತ್ತು ಭುಜದ ಪಟ್ಟಿ ಕಟ್ಟಲು ಸಹಾಯ ಮಾಡಿದಳು. ತನ್ನ ಕಾಲುಗಳಲಲ್ಲಿ ಊತ ಕಾಣಿಸದಿದ್ದಕ್ಕೆ ಸಡಾಕೊ ಸಂತೋಷಪಟ್ಟಳು. ಅವಳು ಕೋಣೆಯಾದ್ಯಂತ ಕುಂಟುತ್ತಾ ನಡೆದು ಕಿಟಕಿಯ ಪಕ್ಕದ ತನ್ನ ಕುರ್ಚಿಯಲ್ಲಿ ಕುಳಿತಳು - ಅವಳು ಕಿಮೋನೊದಲ್ಲಿ ರಾಜಕುಮಾರಿಯಂತೆ ಕಾಣುತ್ತಿದ್ದಳು ಎಂದು ಎಲ್ಲರೂ ಒಪ್ಪಿಕೊಂಡರು.

ಆ ಕ್ಷಣದಲ್ಲಿ ಚಿಜುಕೊ ಒಳಗೆ ಬಂದಳು. ಡಾ. ನುಮಾಟಾ ಸ್ವಲ್ಪ ಸಮಯದವರೆಗೆ ಭೇಟಿ ನೀಡಲು ಅವಳಿಗೆ ಅನುಮತಿ ನೀಡಿದ್ದರು. ಅವಳು ಆಶ್ಚರ್ಯದಿಂದ ಸಡಾಕೊಳನ್ನು ದಿಟ್ಟಿಸಿ ನೋಡಿದಳು, "ನೀನು ಶಾಲಾ ಉಡುಪಿಗಿಂತ ಆ ಉಡುಪಿನಲ್ಲಿ ಚೆನ್ನಾಗಿ ಕಾಣುತ್ತಿದ್ದೀಯೆ" ಎಂದು ಅವಳು ಹೇಳಿದಳು.

ಎಲ್ಲರೂ ನಕ್ಕರು. ಸಡಾಕೊ ಕೂಡ. "ಹಾಗಾದರೆ ನಾನು ಮತ್ತೆ ಗುಣಮುಖಳಾದಾಗ ಪ್ರತಿದಿನ ತರಗತಿಗಳಿಗೆ ಅದನ್ನು ಧರಿಸುತ್ತೇನೆ" ಎಂದು ಅವಳು ತಮಾಷೆ ಮಾಡಿದಳು.

ಮಿತ್ಸು ಮತ್ತು ಈಜಿ ಆ ಯೋಚನೆಗೆ ನಕ್ಕರು.

ಸ್ವಲ್ಪ ಸಮಯದವರೆಗೆ ಅವರು ಮನೆಯಲ್ಲಿ ಕಳೆಯುತ್ತಿದ್ದ ಒಳ್ಳೆಯ ಸಮಯಗಳಂತೆಯೇ ಇತ್ತು. ಅವರು ಪದ ಆಟಗಳನ್ನು ಆಡುತ್ತಿದ್ದರು ಮತ್ತು ಸಡಾಕೊಳ ನೆಚ್ಚಿನ ಹಾಡುಗಳನ್ನು ಹಾಡುತ್ತಿದ್ದರು. ಅಷ್ಟರಲ್ಲಿ, ಅವಳು ಕುರ್ಚಿಯಲ್ಲಿ ಗಟ್ಟಿಯಾಗಿ ಕುಳಿತಳು, ಅದು ತನಗೆ ಉಂಟುಮಾಡಿದ ನೋವನ್ನು ಮರೆಮಾಚಲು ಪ್ರಯತ್ನಿಸುತ್ತಿದ್ದಳು. ಅವಳ ಹೆತ್ತವರು ಹೊರಟುಹೋದಾಗ, ಅವರು ಬಹುತೇಕ ಹರ್ಷಚಿತ್ತದಿಂದ ಕಾಣುತ್ತಿದ್ದರು.

ಮಲಗುವ ಮುನ್ನ, ಸಡಾಕೊ ಒಂದೇ ಒಂದು ಕಾಗದದ ಕ್ರೇನ್ ಅನ್ನು ಮಡಚುವಲ್ಲಿ ಯಶಸ್ವಿಯಾದಳು.

ಆರುನೂರ ನಲವತ್ತನಾಲ್ಕು ...

ಅದು ಅವಳು ಮಾಡಿದ ಕೊನೆಯ ಕ್ರೇನ್ ಆಗಿತ್ತು!.

9.
ಗಾಳಿಯೊಂದಿಗೆ ರೇಸಿಂಗ್

ಸಡಾಕೊ ದುರ್ಬಲವಾಗುತ್ತಿದ್ದಂತೆ, ಅವಳು ಸಾವಿನ ಬಗ್ಗೆ ಹೆಚ್ಚು ಯೋಚಿಸತೊಡಗಿದಳು. ಅವಳು ಸ್ವರ್ಗೀಯ ಪರ್ವತದ ಮೇಲೆ ವಾಸಿಸುತ್ತಾಳಯೇ? ಸಾಯುವುದು ನೋವುಂಟುಮಾಡುತ್ತದೆಯೇ? ಅಥವಾ ನಿದ್ರಿಸುತ್ತಿರುವಂತೆಯೆ?

"ನಾನು ಅದನ್ನು ಮರೆತುಬಿಡಲು ಸಾಧ್ಯವಾದರೆ," ಎಂದು ಸಡಾಕೊ ಯೋಚಿಸಿದಳು. ಆದರೆ ಅದು ಬೀಳುವ ಮಳೆಯನ್ನು ತಡೆಯಲು ಪ್ರಯತ್ನಿಸಿದಂತೆ. ಅವಳು ಬೇರೆ ಯಾವುದೋ ವಿಷಯದ ಬಗ್ಗೆ ಗಮನಹರಿಸಿದ ತಕ್ಷಣ, ಸಾವು ಅವಳ ಮನಸ್ಸಿನಲ್ಲಿ ಮತ್ತೆ ನುಸುಳಿತು.

ಅಕ್ಟೋಬರ್ ಮಧ್ಯಭಾಗದ ಹೊತ್ತಿಗೆ, ಸಡಾಕೊ ಹಗಲು ರಾತ್ರಿಗಳ ಅರಿವು ಕಳೆದುಕೊಂಡಳು. ಒಮ್ಮೆ, ಅವಳು ಎಚ್ಚರವಾಗಿದ್ದಾಗ, ತನ್ನ ತಾಯಿ ಅಳುತ್ತಿರುವುದನ್ನು ನೋಡಿದಳು.

"ಅಳಬೇಡ," ಅವಳು ಬೇಡಿಕೊಂಡಳು. "ದಯವಿಟ್ಟು ಅಳಬೇಡ." ಸಡಾಕೊ ಇನ್ನಷ್ಟು ಹೇಳಬೇಕೆಂದಿದ್ದಳು, ಆದರೆ ಅವಳ ಬಾಯಿ ಮತ್ತು ನಾಲಿಗೆ ಚಲಿಸಲಿಲ್ಲ. ಅವಳ ಕೆನ್ನೆಯ ಮೇಲೆ ಕಣ್ಣೀರು ಜಾರಿತು. ಅವಳು ತನ್ನ ತಾಯಿಗೆ ತುಂಬಾ ದುಃಖ ತಂದಿದ್ದಳು. ಮತ್ತು ಸಡಾಕೊ ಈಗ ಮಾಡಬಹುದಾಗಿರುವುದೊಂದೇ, ಕಾಗದದ ಕ್ರೇನ್‌ಗಳನ್ನು ತಯಾರಿಸುವುದು ಮತ್ತು ಪವಾಡಕ್ಕಾಗಿ ಆಶಿಸುವುದಷ್ಟೆ.

ಅವಳು ಕಾಗದದ ತುಂಡಿಗಾಗಿ ತಡಕಾಡಿದಳು. ಆದರೆ ಅವಳ ಬೆರಳುಗಳು ಅದನ್ನು ಮಡಚಲು ತುಂಬಾ ಬೃಹದಾಕಾರದವು.

"ನನಗೆ ಕ್ರೇನ್ ಕೂಡ ಮಾಡಲಾಗುತ್ತಿಲ್ಲ" ಅವಳು ತನ್ನಷ್ಟಕ್ಕೆ ತಾನೇ ಹೇಳಿಕೊಂಡಳು. "ನಾನು ನಿಜವಾದ ಆಮೆಯಾಗಿ ಬದಲಾಗಿದ್ದೇನೆ!", ಸಡಾಕೊ ಕತ್ತಲೆಯಲ್ಲಿ ಕೊಚ್ಚಿ ಹೋಗುವ ಮೊದಲು ಕಾಗದವನ್ನು ಮಡಚಲು ತನ್ನೆಲ್ಲ ಶಕ್ತಿಯಿಂದ ಬೇಗ, ಬೇಗ ಪ್ರಯತ್ನಿಸಿದಳು.

ಕೆಲವು ನಿಮಿಷಗಳು ನಂತರ ಡಾ. ನುಮಾತಾ ಒಳಗೆ ಬಂದು ಸಡಕೋಳ ಹಣೆಯನ್ನು ಮುಟ್ಟಿ ನಿಧಾನವಾಗಿ ಕಾಗದವನ್ನು ಅವಳ ಕೈಯಿಂದ ಹೊರತೆಗೆದರು. "ವಿಶ್ರಾಂತಿ ಪಡೆಯುವ ಸಮಯ ಬಂದಿದೆ. ನಾಳೆ ನೀನು ಇನ್ನಷ್ಟು ಕ್ರೇನ್‌ಗಳನ್ನು ಮಾಡಬಹುದು" ಎಂದು ಅವರು ಹೇಳುವುದನ್ನು ಅವಳು ಕೇಳಲಿಲ್ಲ.

ಸಡಾಕೊ ಸ್ವಲ್ಪ ತಲೆಯಾಡಿಸಿದಳು. ನಾಳೆ... ನಾಳೆ ತುಂಬಾ ದೂರದಲ್ಲಿದೆ ಎಂದೆನಿಸಿತವಳಿಗೆ.

ಅವಳು ಎಚ್ಚರವಾದಾಗ, ಅವಳ ಕುಟುಂಬ ಅಲ್ಲಿತ್ತು. ಸಡಾಕೊ ಅವರನ್ನು ನೋಡಿ ಮುಗುಳ್ನಕ್ಕಳು. ಅವಳು ಯಾವಾಗಲೂ ಇರುವ ಆ ಬೆಚ್ಚಗಿನ, ಪ್ರೀತಿಯ ವಲಯದ ಭಾಗವಾಗಿದ್ದಳು. ಯಾವುದೂ ಅದನ್ನು ಬದಲಾಯಿಸಲು ಸಾಧ್ಯವಿಲ್ಲ.

ಆಗಲೇ ಅವಳ ಕಣ್ಣುಗಳ ಹಿಂದೆ ದೀಪಗಳು ನೃತ್ಯ ಮಾಡುತ್ತಿದ್ದವು. ಸಡಾಕೊ ತನ್ನ ತೆಳುವಾದ, ನಡುಗುವ ಕೈಯನ್ನು ಚಿನ್ನದ ಕ್ರೇನ್ ಅನ್ನು ಸ್ಪರ್ಶಿಸಲು ತರಲು ಪ್ರಯತ್ನಿಸಿದಳು. ಜೀವನವು ಅವಳಿಂದ ದೂರವಾಗುತ್ತಿತ್ತು, ಆದರೆ ಆ ಕ್ರೇನ್ ಸಡಾಕೊಳನ್ನು ಒಳಗೆ ಬಲಶಾಲಿ ಎಂದು ಭಾವಿಸುವಂತೆ ಮಾಡಿತು.

ಅವಳು ಛಾವಣಿಯಿಂದ ತೂಗಾಡುತ್ತಿದ್ದ ತನ್ನ ಕ್ರೇನ್ ಹಿಂಡನ್ನು ನೋಡಿದಳು. ಅವಳು ನೋಡುತ್ತಿದ್ದಂತೆ, ಶರತ್ಕಾಲದ ಹಗುರವಾದ ಗಾಳಿಯು ಪಕ್ಷಿಗಳನ್ನು ಘರ್ಜಿಸುವಂತೆ ಮತ್ತು ತೂಗಾಡುವಂತೆ ಮಾಡಿತು. ಅವು ಜೀವಂತವಾಗಿದ್ದು ತೆರೆದ ಕಿಟಕಿಯ ಮೂಲಕ ಹೊರಗೆ ಹಾರುತ್ತಿವೆ ಎಂದು ಅವಳಿಗೆ ತೋರುತ್ತಿತ್ತು. ಅವು ಎಷ್ಟು ಸುಂದರ ಮತ್ತು ಸ್ವತಂತ್ರವಾಗಿವೆ! ಸಡಾಕೊ ನಿಟ್ಟುಸಿರುಬಿಟ್ಟು ಕಣ್ಣು ಮುಚ್ಚಿದಳು.

ಅವಳು ನಂತರ ಎಂದಿಗೂ ಎಚ್ಚರಗೊಳ್ಳಲೇ ಇಲ್ಲ.

ಉಪಸಂಹಾರ

ಸಡಾಕೊ ಸಸಾಕಿ ಅಕ್ಟೋಬರ್ 25, 1955 ರಂದು ನಿಧನಳಾದಳು. ಅವಳ ಸಹಪಾಠಿಗಳು ಮುನ್ನೂರ ಐವತ್ತಾರು ಕ್ರೇನ್‌ಗಳನ್ನು ಮಡಿಸಿ, ಒಂದು ಸಾವಿರ ಕ್ರೇನ್‌ಗಳನ್ನು ಸಡಾಕೊ ಜೊತೆ ಸಮಾಧಿ ಮಾಡಿದರು. ಒಂದು ರೀತಿಯಲ್ಲಿ ಅವಳ ಸೆಯನ್ನು ಈಡೇರಿಸಿದರು. ಅವಳು ಜನರ ಹೃದಯದಲ್ಲಿ ದೀರ್ಘಕಾಲ ಬದುಕುತ್ತಾಳೆ.

ಅಂತ್ಯಕ್ರಿಯೆಯ ನಂತರ ಬ್ಯಾಂಬೂ ಕ್ಲಾಸ್ ನವರು ಸಡಾಕೊಳ ಪತ್ರಗಳನ್ನು ಸಂಗ್ರಹಿಸಿ ಒಂದು ಪುಸ್ತಕದ ರೂಪದಲ್ಲಿ ಪ್ರಕಟಿಸಿದರು. ಸಡಾಕೊ ಆಸ್ಪತ್ರೆಯಲ್ಲಿದ್ದಾಗ ಅವರಿಗೆ ನೀಡಿದ್ದ ಗೊಂಬೆಯ ನಂತರ ಅವರು ಅದನ್ನು ಕೊಕೇಶಿ ಎಂದು ಕರೆದರು. ಆ ಪುಸ್ತಕವನ್ನು ಜಪಾನ್‌ನಾದ್ಯಂತ ಕಳುಹಿಸಲಾಯಿತು ಮತ್ತು ಸ್ವಲ್ಪ ಕಾಲದಲ್ಲಿಯೇ ಎಲ್ಲರಿಗೂ ಸಡಾಕೊ ಮತ್ತು ಅವಳ ಸಾವಿರ ಕಾಗದದ ಕ್ರೇನ್‌ಗಳ ಬಗ್ಗೆ ತಿಳಿದುಬಂದಿತು.

ಸಡಾಕೊಳ ಸ್ನೇಹಿತರು ಅವಳಿಗಾಗಿ ಮತ್ತು ಪರಮಾಣು ಬಾಂಬ್ ದಾಳಿಯಿಂದ ಸಾವನ್ನಪ್ಪಿದ ಎಲ್ಲಾ ಮಕ್ಕಳಿಗಾಗಿ ಒಂದು ಸ್ಮಾರಕವನ್ನು ನಿರ್ಮಿಸುವ ಕನಸು ಕಾಣಲು ಪ್ರಾರಂಭಿಸಿದರು. ದೇಶಾದ್ಯಂತ ಯುವಕರು ಈ ಯೋಜನೆಗಾಗಿ ಹಣವನ್ನು ಸಂಗ್ರಹಿಸಲು ಸಹಾಯ ಮಾಡಿದರು. ಅಂತಿಮವಾಗಿ, ಅವರ ಕನಸು ನನಸಾಯಿತು. 1958 ರಲ್ಲಿ ಹಿರೋಷಿಮಾ ಶಾಂತಿ ಉದ್ಯಾನವನದಲ್ಲಿ ಸಡಕೋಳ ಪ್ರತಿಮೆಯನ್ನು ಅನಾವರಣಗೊಳಿಸಲಾಯಿತು. ಸ್ವರ್ಗದ ಪರ್ವತದ ಮೇಲೆ ನಿಂತಿರುವ ಸಡಾಕೊಳ ಪ್ರತಿಮೆ ಅದು. ಅವಳು ತನ್ನ ಚಾಚಿದ ಕೈಗಳಲ್ಲಿ ಚಿನ್ನದ ಕ್ರೇನ್ ಅನ್ನು ಹಿಡಿದಿದ್ದಾಳೆ.

ಅವಳ ಗೌರವಾರ್ಥವಾಗಿ 'ಫೋಲ್ಡೆಡ್ ಕ್ರೇನ್ ಕ್ಲಬ್' ಅನ್ನು ಪ್ರಾರಂಭಿಸಲಅಯಿತು. ಆಗಸ್ಟ್ 6 ರಂದು ಶಾಂತಿ ದಿನದಂದು ಇದರ ಸದಸ್ಯರು ಸಡಕೋಳ ಪ್ರತಿಮೆಯ ಕೆಳಗೆ ಸಾವಿರಾರು ಕಾಗದದ ಕ್ರೇನ್‌ಗಳನ್ನು ಇಡುತ್ತಾರೆ. ಅವರು ಒಂದು ಆಶಯವನ್ನೂ ಮಾಡುತ್ತಾರೆ- ಅವರ ಆಶಯವನ್ನು ಪ್ರತಿಮೆಯ ಬುಡದಲ್ಲಿ ಕೆತ್ತಲಾಗಿದೆ:

This is our cry,

This is our prayer;

Peace in the world.

ಇದು ನಮ್ಮ ಕೂಗು,
ಇದು ನಮ್ಮ ಪ್ರಾರ್ಥನೆಯಿನಿತು;
ಯುದ್ದ ಬೇಡ ಗದ್ದಲ ಬೇಡ
ಶಾಂತಿ ನೆಲೆಸಲಿ ಜಗದೊಳಿಂತು.

ಹಿರೋಷಿಮಾದಲ್ಲಿ ಜನಿಸಿದ ಸಡಾಕೋ ಲವಲವಿಕೆಯ ಓಟಗಾರ್ತಿ- ಅವಳ ಶಾಲೆಯ ಓಟದ ತಂಡದ ತಾರೆ. ಲವಲವಿಕೆಯಿಂದ ಓಡಾಡಿಕೊಂಡಿದ್ದ ಅವಳಳಿಗೆ ಸ್ವಲ್ಪ ದಿನಗಳಲ್ಲಿ ತಲೆಸುತ್ತು ಪ್ರಾರಂಭವಾಗುತ್ತದೆ. ಅವಳು ಶಿಶುವಾಗಿದ್ದಾಗ ಅವಳ ನಗರದ ಮೇಲೆ ಬಿದ್ದ ಪರಮಾಣು ಬಾಂಬ್‌ನ ಪರಿಣಾಮವಾದ ಲ್ಯುಕೇಮಿಯಾದಿಂದ ತೀವ್ರವಾಗಿ ಅಸ್ವಸ್ಥಳಾದ ಸಡಕೋ, ತನ್ನ ಓಟದಂತೆಯೇ ತನ್ನ ಅನಾರೋಗ್ಯವನ್ನು ಎದುರಿಸುತ್ತಾಳೆ - ಅದಮ್ಯ ಮನೋಭಾವದಿಂದ. ಜಪಾನಿನ ದಂತಕಥೆಯನ್ನು ನೆನಪಿಸಿಕೊಳ್ಳುತ್ತಾ, ಸಡಕೋ ಕಾಗದದ ಕ್ರೇನ್‌ಗಳನ್ನು ಮಡಿಸುವ ಕೆಲಸ ಮಾಡಲು ಪ್ರಾರಂಭಿಸುತ್ತಾಳೆ. ಏಕೆಂದರೆ ಒಬ್ಬ ಅನಾರೋಗ್ಯ ಪೀಡಿತ ವ್ಯಕ್ತಿಯು ಸಾವಿರ ಕ್ರೇನ್‌ಗಳನ್ನು ಮಡಚಿದರೆ, ದೇವರುಗಳು ಅವಳ ಆಸೆಯನ್ನು ಪೂರೈಸುತ್ತಾರೆ ಮತ್ತು ಅವಳನ್ನು ಮತ್ತೆ ಆರೋಗ್ಯವಂತರನ್ನಾಗಿ ಮಾಡುತ್ತಾರೆ ಎಂದು ದಂತಕಥೆ ಹೇಳುತ್ತದೆ. ನೈಜ ಕಥೆಯನ್ನು ಆಧರಿಸಿದ "ಸಡಾಕೊ ಮತ್ತು ಸಾವಿರ ಕಾಗದದ ಕ್ರೇನ್‌ಗಳು" ಜಪಾನ್‌ನಲ್ಲಿ ಒಬ್ಬ ಯುವತಿಯನ್ನು ನಾಯಕಿಯನ್ನಾಗಿ ಮಾಡಿದ ಸಾಹಸವನ್ನು ವಿಜೃಂಭಿಸುತ್ತದೆ.